21 ಆಗಸ್ಟ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 163 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಂಬರುವ ಕೆಎಸ್‌ಸಿಎ ಚುನಾವಣೆ ಪ್ರಣಾಳಿಕೆಯನ್ನು ಭಾರತ ಕ್ರಿಕೆಟ್ ತಂಡದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಬಿಡುಗಡೆ ಮಾಡಿದರು.



ಕೈ ಹಿಡಿದು ಮುನ್ನೆಡಸ ಬನ್ನಿ ...! » 2



ಭಾರತದ ಸರಕುಗಳಿಗೆ ರಷ್ಯಾ ಮುಕ್ತ ಆಹ್ವಾನ » 3



ರಾಜ್ಯಕ್ಕೆ ಯೂರಿಯಾ ಪೂರೈಸುವವರಿಗೆ ಬೆಂಬಲ » 4

# ಒಳಮೀಸಲಾತಿ : ಅಗತ್ಯವಿದ್ದರೆ ಮಾರ್ಪಾಡು

## ಮುಂದಿನ ಹಂತದಲ್ಲಿ ತೀರ್ಮಾನ | ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

• ಪ್ರಜೋದಯ ವರದಿ

**ಬೆಂಗಳೂರು:** ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣದ ಬಗ್ಗೆ ಸಂಪುಟ ತೆಗೆದುಕೊಂಡ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದಲ್ಲಿ ಅಧಿಕೃತವಾಗಿ ಘೋಷಣೆ ಮಾಡುವ ಮೂಲಕ, ಏನಾದರೂ ಬದಲಾವಣೆ ಮಾಡಬೇಕಾದರೆ ಮುಂದಿನ ಹಂತದಲ್ಲಿ ತೀರ್ಮಾನ ಮಾಡಲಾಗುವುದೆಂದು ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಮಂಗಳವಾರ ನಡೆದ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೆ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ಎಡಗೈ ಸಮುದಾಯಕ್ಕೆ ಶೇ.6ರಷ್ಟು, ಬಲ ಸಮುದಾಯಕ್ಕೆ ಶೇ.6 ರಷ್ಟು ಹಾಗು ಸ್ಪೃಶ್ಯ ಸಮುದಾಯಕ್ಕೆ ಶೇ.5ರಷ್ಟು ಮೀಸಲಾತಿ ಕಲ್ಪಿಸಲು ತೀರ್ಮಾನ ಮಾಡಲಾಗಿದೆ. ನ್ಯಾ. ನಾಗಮೋಹನ್ ದಾಸ್ ವರದಿಯ ಶಿಫಾರಸ್ಸುಗಳನ್ನು ಕೆಲ ಮಾರ್ಪಾಡುಗಳೊಂದಿಗೆ ಒಳ ಮೀಸಲಾತಿ ಕಲ್ಪಿಸಲಾಗಿದೆ. ಎ,ಬಿ,ಸಿ ಎಂದು ವರ್ಗೀಕರಣ ಮಾಡಿ ಮೀಸಲಾತಿ ಹಂಚಲಾಗಿದೆ ಎಂದರು.



ಒಳ ಮೀಸಲಾತಿ ಹೋರಾಟದ ಮೊಕದ್ದಮೆ ಹಿಂಪಡೆಯಲೂ ತೀರ್ಮಾನಿಸಲಾಗಿದೆ. ಈ ಮೂಲಕ ದಶಗಳ ಹೋರಾಟಕ್ಕೆ ನಮ್ಮ ಸರ್ಕಾರ ನ್ಯಾಯ ಒದಗಿಸಿದೆ. ಏನಾದರೂ ಬದಲಾವಣೆ ಮಾಡಬೇಕಾದರೆ ಮುಂದಿನ ಹಂತದಲ್ಲಿ ತೀರ್ಮಾನ ಮಾಡುತ್ತೇವೆಂದು ಮುಖ್ಯಮಂತ್ರಿ ಹೇಳುತ್ತಿದ್ದಂತೆಯೇ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಸ್ವಾಗತಿಸಿದರು.

ಬಳಿಕ ವಿಪಕ್ಷ ಬಿಜೆಪಿ ಸದಸ್ಯರು ಮಾತನಾಡಲು ಮುಂದಾದರು. ಆದರೆ, ಅದಕ್ಕೆ ಸ್ಪೀಕರ್ ಯು.ಟಿ.ಖಾದರ್, ಈಗ ಮಾತನಾಡುವುದು ಬೇಡವೆಂದು ಅವಕಾಶ ನೀಡುವುದಿಲ್ಲ. ಬಳಿಕ ಮಾತು ಮುಂದುವರಿಸಿದ ಮುಖ್ಯಮಂತ್ರಿ, ನಿಮ್ಮ ಕೈಯಲ್ಲಿ ಮಾಡಲು ಆಗಿಲ್ಲ ಅಂತಾನೇ ನಾವು ಮಾಡಿದ್ದೇವೆ. ನಿಮ್ಮ ಕಂಡರೆ ಭಯ ಇಲ್ಲವೆಂದು ಬಿಜೆಪಿಯವರಿಗೆ ತಿರುಗೇಟು ನೀಡಿದರು.

**ಮೀಸಲಾತಿ ಜಾರಿಗೆ ವಿಪಕ್ಷ ಪಟ್ಟು**

ಸಿದ್ದರಾಮಯ್ಯ ಅವರ ಮಾತು ಮುಗಿಯುತ್ತಿದ್ದಂತೆಯೇ ವಿಪಕ್ಷ ನಾಯಕ ಆರ್.ಅಶೋಕ್ ಅವರು ಎದ್ದು ನಿಂತು ಮೀಸಲಾತಿ ಜಾರಿ ಬಗ್ಗೆ ಮಾತನಾಡಲು ಪಟ್ಟು ಹಿಡಿದರು. ಈಗ ಚರ್ಚೆ ಮಾಡಲು ಅವಕಾಶ ಇಲ್ಲ, ವಿಧಾನ ಪರಿಷತ್ತಿನಲ್ಲಿ ಉತ್ತರ ಇದೆ. ಹೀಗಾಗಿ ಅಲ್ಲಿಗೆ ಹೋಗಿದ್ದಾರೆಂದು ಸ್ಪೀಕರ್ ಹೇಳಿದರು. ಈ ವೇಳೆ ಪ್ರಶ್ನೆಗೆ ಅವಕಾಶ ಇದೆ ಎಂದು ಬಿಜೆಪಿ ಸದಸ್ಯ ಸುನಿಲ್ ಕುಮಾರ್ ನಿಯಮದ ಪುಸ್ತಕ ಓದಿದರು. ಪ್ರಶ್ನೆ ಕೇಳಲು ಅವಕಾಶ ಇಲ್ಲ ಅಂದರೆ ಸರ್ಕಾರ ಏನೋ ಮುಚ್ಚಿಡಲು ಮುಂದಾಗಿದೆ ಆರೋಪಿಸಿದರು.

**ಪರಿಷತ್‌ನಲ್ಲೂ ಉತ್ತರಿಸಿದ ಸಿಎಂ**

ವಿಧಾನಸಭೆ ಬಳಿಕ ಮುಖ್ಯಮಂತ್ರಿ ವಿಧಾನ ಪರಿಷತ್‌ನಲ್ಲೂ ಸಹ ಒಳ ಮೀಸಲಾತಿ ವಿಚಾರ ಪ್ರಸ್ತಾಪ ಮಾಡಿ,

» ನಾಲ್ಕನೇ ಪುಟದಲ್ಲಿ

### ಸೌಹಾರ್ದ ಸಹಕಾರಿ ತಿದ್ದುಪಡಿ ತಿರಸ್ಕೃತ

ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ ವಿಧಾನ ಪರಿಷತ್‌ನಲ್ಲಿ ತಿರಸ್ಕೃತಗೊಂಡು ಸರ್ಕಾರ ಮುಜುಗುರಕ್ಕೆ ಒಳಗಾಗಿದೆ. ಮಂಗಳವಾರ ವಿಧಾನಸಭೆ ಅಧಿವೇಶನದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ ವಿಚಾರವಾಗಿ ಸುದೀರ್ಘ, ಚರ್ಚೆಯಾಗಿ ಅಂಗೀಕಾರಗೊಂಡಿತ್ತು. ಬುಧವಾರ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕವನ್ನು ವಿಧಾನಪರಿಷತ್‌ನಲ್ಲಿ ಮಂಡಿಸಿದರು. ಸಭಾಪತಿ ಬಸವರಾಜ್ ಹೊರಟ್ಟಿ ಅವರು ಮತಕ್ಕೆ ಹಾಕಬೇಕಾ, ಬೇಡವಾ ಎಂದು ಕೇಳಿದರು. ವಿಪಕ್ಷಗಳು ಮತಕ್ಕೆ ಹಾಕುವಂತೆ ಹೇಳಿದ ಮೇಲೆ, ಸಭಾಪತಿ ಬಸವರಾಜ ಹೊರಟ್ಟಿ ವಿಧೇಯಕವನ್ನು ಮತಕ್ಕೆ ಹಾಕಿದರು. ಆಗ, ವಿಧೇಯಕದ ಪರವಾಗಿ 23 ಮತಗಳು ಮತ್ತು ವಿರುದ್ಧವಾಗಿ 26 ಮತಗಳು ಬಂದವು. ಈ ಕಾರಣದಿಂದ ವಿಧೇಯಕ ತಿರಸ್ಕೃತಗೊಂಡಿತು.

### ಬದಲಾವಣೆ ಸುಳಿವು

ಎಡಗೈ ಜೊತೆ ಬಲಗೈ ಸಮುದಾಯಕ್ಕೆ ಶೇ.6ರಷ್ಟು ಮೀಸಲಾತಿ ಕಲ್ಪಿಸಿ ಸರ್ಕಾರ ಎಚ್ಚರಿಕೆ ಇಟ್ಟಿದೆ. ಆದರೆ, ಲಂಬಾಣಿ, ಬೋವಿ, ಅಲೆಮಾರಿ ಸೇರಿ 60 ಪರಿಶಿಷ್ಟ ಜಾತಿಗಳಿಗೆ ಶೇ.5ರಷ್ಟು ಮೀಸಲಾತಿ ನೀಡಿರುವುದು ಹೊಸ ಸಂಘರ್ಷಕ್ಕೆ ನಾಂದಿಹಾಡಿದೆ. ಇನ್ನು ಒಳಮೀಸಲಾತಿ ಜಾರಿಗೆ ಸಂಬಂಧ ಕೆಲ ತಪ್ಪುಗಳಾಗಿವೆ ಎಂದು ದಲಿತ ಮುಖಂಡರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅದರಲ್ಲೂ ಅಲೆಮಾರಿ ಸಮುದಾಯಕ್ಕೆ ಅನ್ಯಾಯವಾಗಿದೆ ಎನ್ನುವ ಆರೋಪಗಳು ಕೇಳಿಬರುತ್ತಿವೆ. ಇದರ ನಡುವೆ ಸಿದ್ದರಾಮಯ್ಯ ಸದನದಲ್ಲಿ ಉತ್ತರಿಸುವಾಗ ಬದಲಾವಣೆ ಬಗ್ಗೆ ಮುಂದೆ ತೀರ್ಮಾನ ಮಾಡುತ್ತೇವೆಂದು ಭರವಸೆ ನೀಡಿದರು.

# ಸದನದಲ್ಲಿ ಕಾಫಿ, ಕಾಳುಮೆಣಸು, ಅಡಿಕೆಗೆ ಹಾನಿ ಪ್ರಸ್ತಾಪ

## ಪರಿಹಾರ ವಿತರಣೆಗೆ ಸರ್ವೆ: ಶಾಸಕ ಸಿಮೆಂಟ್ ಮಂಜು ಪ್ರಶ್ನೆಗೆ ಕೃಷಿ ಸಚಿವ ಉತ್ತರ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದಲ್ಲಿ ವಾಡಿಕೆಗಿಂತ ಅತೀ ಹೆಚ್ಚು ಮಳೆಯಾಗಿರುವುದರಿಂದ ಕಾಫಿ, ಏಲಕ್ಕಿ, ಕಾಳು ಮೆಣಸು, ಅಡಿಕೆ ಬೆಳೆಗಳು ನಾಶವಾಗಿ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಸೂಕ್ತ ಪರಿಹಾರ ನೀಡಬೇಕೆಂದು ಸದನದಲ್ಲಿ ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.

ಸಕಲೇಶಪುರ-ಆಲೂರು-ಕಟ್ಟಾಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಬಾರಿ ಮುಂಗಾರು ಮಳೆ ಒಂದು ತಿಂಗಳಿಗಿಂತ ಮುಂಚಿತವಾಗಿ ಆರಂಭವಾಗಿ ಈಗಲೂ ಸುರಿಯುತ್ತಿರುವುದರಿಂದ ಸಕಲೇಶಪುರ ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಕಾಫಿ, ಏಲಕ್ಕಿ, ಕಾಳುಮೆಣಸು ಹಾಗು ಆಲೂರು ಮತ್ತು ಕಟ್ಟಾಯ ಭಾಗಗಳಲ್ಲಿ ವಾಣಿಜ್ಯ ಬೆಳೆಯಾಗಿರುವ ಮೆಕ್ಕೆಜೋಳ ಬಿಳಿಸುಳಿ ರೋಗದಿಂದ ನಾಶವಾಗಿದೆ. ಕಾಫಿ ವರ್ಷಕ್ಕೆ ಒಂದೇ ಬೆಳೆಯಾಗಿದೆ. ಈ ಬಾರಿಯ ಭಾರೀ ಗಾಳಿ-ಮಳೆಗೆ ಕಾಫಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಸರ್ಕಾರದ ಗಮನ ಸೆಳೆದರು.

ಭಾರೀ ಮಳೆಯಿಂದ ನನ್ನ ಕ್ಷೇತ್ರ





ವ್ಯಾಪ್ತಿಯ ರಸ್ತೆ, ಸೇತುವೆಗಳಿಗೆ ಹಾನಿಯುಂಟಾಗಿದೆ. ಈ ಬಗ್ಗೆ ಸಂಬಂಧಪಟ್ಟ ಸಚಿವರ ಗಮನಕ್ಕೆ ಹಲವು ಬಾರಿ ತಂದಿದ್ದರೂ ಪರಿಹಾರ ಸಿಕ್ಕಿಲ್ಲ. ಮಳೆ ಹಾನಿಯಿಂದ ರೈತರು, ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಗರಿಷ್ಠ 150 ಇಂಚು ಮಳೆಯಾಗುವ ಪ್ರದೇಶದಲ್ಲಿ ಈ ಬಾರಿ 250 ಇಂಚು ಮಳೆಯಾಗಿದೆ. ಬೆಳೆಗಾರರ ಕಷ್ಟಕ್ಕೆ ಸರ್ಕಾರ ನೆರವು ನೀಡಲು ಮುಂದಾಗಬೇಕು. ಎಸ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ರೈತರಿಗೆ ಪರಿಹಾರ ನೀಡಬೇಕು. ರೈತರ ಕಷ್ಟಕ್ಕೆ ಸರ್ಕಾರ ಧಾವಿಸದಿದ್ದರೆ ರೈತರ ಬದುಕು ಸರ್ವನಾಶವಾಗಲಿದೆ. ಮಳೆಹಾನಿಯಿಂದ ಆಗಿರುವ ಎಲ್ಲಾ ಬೆಳೆಗಳಿಗೆ ಸರ್ಕಾರ ಪರಿಹಾರ ಕೊಡುವ ಕೆಲಸ ಮಾಡ ಬೇಕೆಂದು ಅಧಿವೇಶನದಲ್ಲಿ ಆಗ್ರಹಿಸಿದರು.

**ಬೆಳೆಹಾನಿ ವರದಿಗೆ ಸರ್ವೆ ಕಾರ್ಯ**

ಶಾಸಕರ ಮನವಿಗೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು, ಹಾಸನ, ಮಲೆನಾಡು ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿರುವುದರಿಂದ ಸಾಕಷ್ಟು ಬೆಳೆಗಳು ಹಾನಿ ಯಾಗುವ ಜೊತೆಗೆ ಇಳುವರಿ ಮೇಲೆಯೂ ಪರಿಣಾಮ ಬೀರಿದೆ. ಕಂದಾಯ ಮತ್ತು ಕೃಷಿ ಇಲಾಖೆ ಜಂಟಿಯಾಗಿ ಸರ್ವೆ ನಡೆಸಿ ಬೆಳೆ ಹಾನಿ ವರದಿ ನೀಡಲು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಆದೇಶ ಹೊರಡಿಸಲಾಗಿದೆ. ವರದಿ ಬಂದ ಬಳಿಕ ಎನ್‌ಡಿಆರ್‌ಎಫ್ ಮತ್ತು ಬೆಳೆ ವಿಮೆಯಡಿ ಎಷ್ಟು ಪರಿಹಾರ ನೀಡಲು ಸಾಧ್ಯವೂ ಅದನ್ನು ಕೊಡಿಸುವ ಕೆಲಸ ಮಾಡಲಾಗುವುದು. ಬೆಳೆ ಹಾನಿ ಸರ್ಕಾರದ ಗಮನದಲ್ಲಿದೆ. ಏಪ್ರಿಲ್, ಮೇ ತಿಂಗಳಿನಿಂದಲೂ ಮಳೆಯಾಗು ತ್ತಲೇ ಇದೆ. ಎಲ್ಲವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದರು.

# ಪ್ರೀತಿ ನಿರಾಕರಣೆ : ಕಾರಿನೊಂದಿಗೆ ಕೆರೆಗೆ ತಳ್ಳಿ ಮಹಿಳೆ ಕೊಲೆ

## ಪೋಷಕರ ಆರೋಪ : ಪ್ರಕರಣ ದಾಖಲು | ಆರೋಪಿ ಬಂಧನ

• ಪ್ರಜೋದಯ ವರದಿ

**ಬೇಲೂರು :** ಕೆರೆಗೆ ಕಾರು ಉರುಳಿ ಮಹಿಳೆ ಸಾವು ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದ್ದು, ಅದು ಆಕಸ್ಮಿಕವಲ್ಲ, ವ್ಯವಸ್ಥಿತ ಕೊಲೆ ಎನ್ನುವುದು ಪೊಲೀಸರ ತನಿಖೆಯಲ್ಲಿ ತಿಳಿದು ಬಂದಿದ್ದು, ಆರೋಪಿ ರವಿಯನ್ನು ಬಂಧಿಸಲಾಗಿದೆ.

ತಾಲ್ಲೂಕಿನ ಚಂದನಹಳ್ಳಿ ಗ್ರಾಮದ ಶ್ವೇತಾ (29) ಮೃತಪಟ್ಟು, ಆಕೆಯ ಸ್ನೇಹಿತ ರವಿ ವಿರುದ್ಧ ಕೊಲೆ ಆರೋಪ ದಾಖಲಾಗಿದೆ. ಮಂಗಳವಾರ ರಾತ್ರಿ ತಾಲ್ಲೂಕಿನ ಚಂದನಹಳ್ಳಿ ಕೆರೆ ಏರಿ ಬಳಿ ಕಾರು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಪರಿಣಾಮ ಮಹಿಳೆ ನೀರಿನಲ್ಲಿ ಮುಳುಗಿ ಮೃತಪಟ್ಟರೆ, ಕಾರು ಚಲಾಯಿಸುತ್ತಿದ್ದ ಆಕೆಯ ಸ್ನೇಹಿತ ಈಜಿ ದಡ ಸೇರಿ ಜೀವ ಉಳಿಸಿಕೊಂಡಿದ್ದ ಎಂದು ಮೊದಲಿಗೆ ಹೇಳಾಗಿತ್ತು. ಆದರೆ, ಮಹಿಳೆಯ ಪೋಷಕರು ರವಿ ವಿರುದ್ಧ ಕೊಲೆ ಆರೋಪ ಮಾಡಿದ್ದರಿಂದ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದಾಗ ಅಪಘಾತವಲ್ಲ, ಕೊಲೆ ಎಂಬ ಸಂಶಯ ಮೂಡಿದೆ.



ಶ್ವೇತಾ ಹಾಸನದಲ್ಲಿ ಕೆಲಸ ಮಾಡುವ ವೇಳೆ ಪರಿಚಿತನಾಗಿದ್ದ ವಿವಾಹಿತ ರವಿ ಜೊತೆ ಗೆಳೆತನ ಹೊಂದಿದ್ದಳು. ಗಂಡನಿಂದ ದೂರವಾಗಿದ್ದ ಮಹಿಳೆ ತಂದೆ- ತಾಯಿಯೊಂದಿಗೆ ವಾಸವಿದ್ದಳು. ಈ ನಡುವೆ ರವಿ ನನ್ನೊಟ್ಟಿಗೆ ಬಾ ಎಂದು ಸದಾ ಪೀಡಿಸುತ್ತಿದ್ದ. ಶ್ವೇತಾ ನಿರಾಕರಿಸಿದ್ದಕ್ಕೆ ಕೆರೆಗೆ ತಳ್ಳಿ ಕೊಲೆ ಮಾಡಲಾಗಿದೆ ಎಂದು ಮಹಿಳೆಯ ಸಂಬಂಧಿಕರು ಆರೋಪ ಮಾಡಿದ್ದಾರೆ.

ಮಂಗಳವಾರ ರಾತ್ರಿ ಕಾರಿನಲ್ಲಿ ಶ್ವೇತಾಳನ್ನು ಮನೆಗೆ ಬಿಡಲು ಚಂದನಹಳ್ಳಿ ಕೆರೆ ಏರಿ ಮೇಲೆ ಬರುವಾಗ ಕಾರು ಸಹಿತ ಕೆರೆಗೆ ನೂಕಿ ಕೊಲೆ ಮಾಡಿದ ಬಳಿಕ ಆಕಸ್ಮಿಕವಾಗಿ ಕಾರು ಬಿದ್ದಿದೆ ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದ. ಶ್ವೇತಾ ಕುಟುಂಬ ಸದಸ್ಯರ ದೂರು ಆಧರಿಸಿ ಅರೇಹಳ್ಳಿ ಠಾಣೆ ಪೊಲೀಸರು ಆರೋಪಿಯನ್ನು ವಿಚಾರಣೆ ನಡೆಸುತ್ತಿದ್ದಾರೆ.

**ಆಕಸ್ಮಿಕವೆಂದು ಬಿಂಬಿಸಲು ಯತ್ನ**

ಶ್ವೇತಾ, ರವಿ ಪ್ರಯಾಣಿಸುತ್ತಿದ್ದಾಗ ಕಾರು ನಿಯಂತ್ರಣ ತಪ್ಪಿ ಕೆರೆಗೆ ಬಿದ್ದಿದೆ. ಕಾರಿನ ಬಾಗಿಲು ತೆಗೆಲಾಗದೆ ಶ್ವೇತಾ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ. ನಾನು ಬಾಗಿಲು ತೆರೆದು ಈಜಿ ದಡ ಸೇರಿ ಜೀವ ಉಳಿಸಿಕೊಂಡಿದ್ದಾಗಿ ಹೇಳಿಕೆ ನೀಡಿದ್ದ.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಶವವನ್ನು ಕೆರೆಯಿಂದ ಹೊರ ತೆಗೆದರು. ತಡೆಗೋಡೆ ಇಲ್ಲದ ಕಾರಣ ರಾತ್ರಿ ಸಮಯದಲ್ಲಿ ಕೆರೆಗೆ ಕಾರು ಬಿದ್ದು ಯುವತಿ ಸಾವನಪ್ಪಿದ್ದರಿಂದ ಗ್ರಾಮಸ್ಥರು ಪ್ರತಿಭಟನೆ ಕೂಡ ನಡೆಸಿದ್ದರು.

# ದೇವರಾಜ ಅರಸು ಅವರ ನಾಯಕತ್ವ ಗುಣ ಬೆಳೆಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ :** ತುಳಿತಕ್ಕೊಳಗಾದವರ ಪರ ಕಾಳಜಿ ತೋರಿ ಅನೇಕ ಯೋಜನೆಗಳನ್ನು ಜಾರಿಗೆ ತಂದು ಅವರ ಏಳಿಗೆಗೆ ಶ್ರಮಿಸಿದ ಮಹಾನ್ ನಾಯಕ ಡಿ. ದೇವರಾಜ ಅರಸು ಎಂದು ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಹೇಳಿದರು.

ಬುಧವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ನೇತಾರ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮೌನ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿ, ಆರ್ಥಿಕ ಮತ್ತು ಸಾಮಾಜಿಕವಾಗಿ ಸದೃಢವಾದಂತಹವರನ್ನು ಎದುರಾಕಿಕೊಂಡು ಬಡವರು, ಹಿಂದುಳಿದವರು ಪರ ನಾಯಕತ್ವ ಗುಣವುಳ್ಳ ಮಹಾನ್ ಸಾಧಕರಾಗಿದ್ದಾರೆ. ತಮಗೆ ಸಿಕ್ಕ ಅಧಿಕಾರವನ್ನು ಸಮಾಜದ ಏಳಿಗೆಗಾಗಿ ಬಳಸಿ ಕೊಂಡವರು. ಸಮಾಜದಲ್ಲಿದ್ದಂತಹ ಮಲಹೊರುವ ಪದ್ಧತಿಯನ್ನು ಹೋಗಲಾಡಿಸಿ, ಬಡವರಿಗೆ ಭೂಮಿ, ಕಾರ್ಮಿಕರಿಗೆ ಸೂರು ಒದಗಿಸಿ ಸಾಮಾಜಿಕ ಕ್ರಾಂತಿಯನ್ನು ಮಾಡಿ, ಶತಶತಮಾನಗಳಲ್ಲೂ ತಮ್ಮ ಹೆಸರು ಉಳಿಯುವ ರೀತಿಯಲ್ಲಿ ಕೆಲಸಗಳನ್ನು ಮಾಡಿದವರು ಅರಸು ಎಂದರು.





ಕರ್ನಾಟಕದ ಇತಿಹಾಸದಲ್ಲಿ ಯಾವಾಗಲೂ ಅಗ್ರಗಣ್ಯ ಸ್ಥಾನದಲ್ಲಿ ಅರಸು ಅವರು ಇರುತ್ತಾರೆ. ಇವರ ಸಾಧನೆಗಳ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳಿ ಮತ್ತು ಅವರ ನಾಯಕತ್ವ ಗುಣವನ್ನು ಪ್ರತಿಯೊಂದು ಮಕ್ಕಳು ರೂಢಿಸಿಕೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಮಾತನಾಡಿ, ಕರ್ನಾಟಕದ ಅಭಿವೃದ್ಧಿಯ ಹರಿಕಾರರು, ರಾಜಕೀಯ ಇಚ್ಛಾಶಕ್ತಿ ಉಳ್ಳವರು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ಹಾಗೂ ಕರ್ನಾಟಕ ಎಂದು ಮರುನಾಮಕರಣ ಮಾಡಿದ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿರುವ ಎಲ್ಲರೂ ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರಿಯಬೇಕೆಂಬ ಭಾವನೆಯಿಂದ 1973 ರಲ್ಲಿ ಉಳುವವನೇ ಭೂಮಿಯ ಒಡೆಯ ಎನ್ನುವ ಕಾನೂನನ್ನು ಜಾರಿಗೊಳಿಸುವ ಮೂಲಕ ಲಕ್ಷಾಂತರ ಕುಟುಂಬಗಳ ಮನೆಯನ್ನು ಬೆಳಗಿದವರು. ನ್ಯಾಯಬೆಲೆ ಅಂಗಡಿಗಳನ್ನು ತೆರೆದವರು. ಜೊತೆಗೆ 518 ಹಾಸ್ಟೆಲ್‌ಗಳನ್ನು ಹಾಗೂ ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳನ್ನು ತೆರೆದಿದ್ದಾರೆ. 15 ಲಕ್ಷ ವಿದ್ಯಾರ್ಥಿಗಳಿಗೆ ಅಂದಿನ ಕಾಲದಲ್ಲಿಯೇ ಮಧ್ಯಾಹ್ನದ ಉಪಹಾರದ ಯೋಜನೆ, ಸಾಲಮನ್ನಾ ಮಾಡುವುದಕ್ಕಾಗಿ ಋಣಭಾರ ಕಾಯ್ದೆಯನ್ನು ಕೂಡ ಜಾರಿಗೆ ತಂದವರು ಅರಸು ಅವರು ಎಂದರು.

ಸಮಾಜದ ಜನರಿಗಾಗಿ ಅನೇಕ ರೀತಿಯ ಯೋಜನೆಗಳನ್ನು ಜಾರಿ ಮಾಡಿದವರು. ಸುಮಾರು 29 ವರ್ಷಗಳ ಕಾಲ ಸಾರ್ವಜನಿಕ ಕ್ಷೇತ್ರದಲ್ಲಿದ್ದವರು. ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ, ಪ್ರವಾಸೋದ್ಯಮ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಇಂದು ಇವರ ಕುರಿತಾಗಿ ಇವರ ಪರಿಚಯವನ್ನು ಮಕ್ಕಳಿಗೆ ತಿಳಿಸಲು ಒಂದು ಕಿರು ಪುಸ್ತಕವನ್ನು ಮಾಡಿ ಶಾಲಾ, ವಸತಿ ನಿಲಯದ ಎಲ್ಲಾ ಮಕ್ಕಳಿಗೆ ಹಂಚಲು ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಎಲ್ಲರೂ ಇವರ ಜೀವನ ಚರಿತ್ರೆಯನ್ನು ಓದಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಿಮ್ಮ ಕೆಲಸಗಳಲ್ಲಿ ಅದು ಅಳವಡಿಕೆಯಾಗಲಿ ಮತ್ತು ಮುಂದುವರೆಯಲಿ ಅವರ ನೆನಪನ್ನು ಕೇವಲ ಜಯಂತಿಗಳ

» ಮೂರನೇ ಪುಟದಲ್ಲಿ

# ಶೇ.50 ರಷ್ಟು ಕಾಫಿ ಬೆಳೆ ಹಾನಿ: ಪರಿಹಾರಕ್ಕೆ ಆಗ್ರಹ

## ಕಾಫಿ ಮಂಡಳಿ, ಕಂದಾಯ-ತೋಟಗಾರಿಕೆ ಇಲಾಖೆ ಜಂಟಿ ಸಮೀಕ್ಷೆಗೆ ಒತ್ತಾಯ

• ಪ್ರಜೋದಯ ವರದಿ

**ಹಾಸನ :** ಈ ಬಾರಿ ಸುರಿದ ಧಾರಾಕಾರ ಮಳೆಗೆ ಶೇ.50 ರಷ್ಟು ಕಾಫಿ ಬೆಳೆ ಹಾನಿಯಾಗಿದೆ. ನಷ್ಟಕ್ಕೆ ರಾಷ್ಟ್ರೀಯ ವಿಪತ್ತು ಯೋಜನೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಯೋಜನೆ (ಎಸ್‌ಡಿಆರ್‌ಎಫ್) ಯಿಂದ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಕರ್ನಾಟಕ ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಫಿ, ಕಾಳು ಮೆಣಸು, ಅಡಿಕೆ ಬೆಳೆಯಲ್ಲಿ ಕೊಳೆ ರೋಗ ಕಂಡು ಬಂದು ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ.





ಕಾಳುಮೆಣಸು ಬಳ್ಳಿಗಳು ಸಹ ರೋಗಕ್ಕೆ ತುತ್ತಾಗಿವೆ. ಸರ್ಕಾರ ಕೂಡಲೇ ಸಂಕಷ್ಟದಲ್ಲಿರುವ ಕಾಫಿ ಬೆಳೆಗಾರರ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು.

ಕಾಫಿ ಬೆಳೆಯುವ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಕಳೆದ ಮೇ ಮತ್ತು ಜೂನ್ ತಿಂಗಳಿನಲ್ಲಿ ನಿರಂತರವಾಗಿ ಸುರಿದ ಅತಿಯಾದ ಮಳೆಯಿಂದ ಕಾಫಿ ತೋಟದಲ್ಲಿ ಅಪಾರ ಪ್ರಮಾಣದಲ್ಲಿ ಕಾಫಿ ಫಸಲು ನಷ್ಟವಾಗಿದೆ. ಬೆಳೆಹಾನಿಗೆ ಸಂಬಂಧಿಸಿದಂತೆ ಈಗಾಗಲೇ ಕಾಫಿ ಮಂಡಳಿ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ನೀಡಿದ್ದಾರೆ. ಈಗ ಮತ್ತೊಮ್ಮೆ ಕಂದಾಯ ಇಲಾಖೆ, ಕಾಫಿ ಮಂಡಳಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಶೀಘ್ರದಲ್ಲಿ ಕಾಫಿ ತೋಟಗಳಿಗೆ ಭೇಟಿ ನೀಡಿ ನಷ್ಟದ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ನೀಡಿ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರದೊರಕಿಸಿಕೊಡಬೇಕೆಂದರು.

ಮೇ ತಿಂಗಳಿನಿಂದಲೂ ಮಳೆ ನಿರಂತರವಾಗಿ ಮುಂದುವರೆದು ಕಳೆದ ಒಂದು ವಾರದಿಂದ ಶೀತ, ಗಾಳಿ ವಾತಾವರಣದಿಂದ ಕೂಡಿ ಅಪಾರ ಪ್ರಮಾಣದಲ್ಲಿ ಮಳೆ ಸುರಿಯುತ್ತಿದೆ. ಹೀಗಾಗಿ ಕಾಫಿ ಬೆಳೆಗಾರರು ತೀವ್ರ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಈ ಹಿಂದೆ ಕಾಫಿ ನಷ್ಟದ ಪ್ರಮಾಣ ಸಮೀಕ್ಷೆ ನಡೆಸಿದ ನಂತರ ನಿರಂತರವಾಗಿ ಮಳೆ

» ಮೂರನೇ ಪುಟದಲ್ಲಿ

# ಮಿನಿ ಟ್ರ್ಯಾಕ್ಟರ್ ಮಗುಚಿ ಯುವಕ ಮೃತ

• ಪ್ರಜೋದಯ ವರದಿ

**ಅರಕಲಗೂಡು :** ಮಿನಿ ಟ್ರ್ಯಾಕ್ಟರ್ ಮಗುಚಿ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಕೊಣನೂರು ಹೋಬಳಿ ಕಬ್ಬಳಿಗೆರೆ ಬೆಟ್ಟದಲ್ಲಿ ಬುಧವಾರ ಸಂಜೆ ನಡೆದಿದೆ.

ಮೃತ ಯುವಕನನ್ನು ತಾಲೂಕಿನ ವಿ.ಜಿ.ಕೊಪ್ಪಲು ಗ್ರಾಮದ ಕಿರಣ್ ಕುಮಾರ್ ಎಂದು ಗುರುತಿಸಲಾಗಿದೆ. ಕಿರಣ್‌ಕುಮಾರ್ ಕಬ್ಬಳಿಗೆರೆ ಸಮೀಪದ ಗದ್ದೆ ಉಳುಮೆ ಕೆಲಸ ಮುಗಿಸಿ ಕಬ್ಬಳಿಗೆರೆ ಬೆಟ್ಟಕ್ಕೆ ಟ್ರ್ಯಾಕ್ಟರ್‌ನಲ್ಲಿ ಹೋಗಿ ದೇವರ ದರ್ಶನ ಪಡೆದು ಸೆಲ್ಫಿ ತೆಗೆಯುವ ವೇಳೆ ಆಯಾ ತಪ್ಪಿ ಟ್ರ್ಯಾಕ್ಟರ್ ಮಗುಚಿದಾಗ ಅಡಿಗೆ ಸಿಲುಕಿ ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾನೆ. ಕುಟುಂಬಸ್ಥರ ಆಕ್ರಂಧನ ಮುಗಿಲು ಮುಟ್ಟಿತು.

# ಶ್ರೇಯಸ್ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು

• ಪ್ರಜೋದಯ ವರದಿ

**ಹಾಸನ:** ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಹಣ ಹಂಚಿಕೆ ಮಾಡಲಾಗಿದೆ ಎಂಬ ಆರೋಪ ಸಂಬಂಧ ವಕೀಲ ದೇವರಾಜೇಗೌಡ ಅವರು ಸಂಸದ ಶ್ರೇಯಸ್ ಪಟೇಲ್ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಕೆಲ ದಿನಗಳ ಹಿಂದೆಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯಸಭಾ ಸದಸ್ಯ ಚಂದ್ರಶೇಖರ್, ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿ, ಕ್ರಿಮಿನಲ್ ಪ್ರಕರಣ ದಾಖಲಿಸಲು ಕೋರಿದ್ದರು.

ಬುಧವಾರ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿ, ಆರೋಪಕ್ಕೆ ಸಂಬಂಧಿಸಿದಂತೆ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿರುವ ಆಡಿಯೋ ಕ್ಲಿಪ್, ದಾಖಲೆ ಸಮೇತ ನೀಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ದೇವರಾಜೇಗೌಡ ಅವರು, ಆಡಿಯೋ ಬೆನ್ನಲೆ ನಾನು ಸಿಬಿಐಗೆ ದೂರು ನೀಡಿದ್ದೆ. ಚುನಾವಣಾ ಆಯೋಗಕ್ಕೆ ಸಿಬಿಐ ದೂರು ವರ್ಗಾಯಿಸಿದೆ. ಆಯೋಗದಿಂದ ಮಾಹಿತಿ ನೀಡುವಂತೆ ನನಗೆ ಇ-ಮೇಲ್ ಬಂದಿತ್ತು. ನಾನು ದೆಹಲಿಗೆ ತೆರಳಿ ದಾಖಲೆಗಳನ್ನು ನೀಡಿದ್ದೇನೆ. ಇದರಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹೆಸರುಗಳು ಉಲ್ಲೇಖವಾಗಿವೆ ಎಂದು ತಿಳಿಸಿದರು.



**ಏನಿದು ಪ್ರಕರಣ**

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದ ಸಂಸದ ಶ್ರೇಯಸ್ ಪಟೇಲ್ ಪರವಾಗಿ ಜಿಲ್ಲೆಯಲ್ಲಿ ಹಣ ಹಂಚಿಕೆ ಮಾಡಲು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ರಾಜ್ಯಸಭಾ ಸದಸ್ಯ ಎನ್.ಚಂದ್ರಶೇಖರ್ ಸಮ್ಮುಖದಲ್ಲಿ ತೀರ್ಮಾನಿಸಲಾಗಿದೆ ಎಂದು ಶಾಸಕ ಶಿವಲಿಂಗೇಗೌಡ ಫೋನ್‌ನಲ್ಲಿ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿತ್ತು.


# ಕಾಡಾನೆ ಕ್ಯಾಪ್ಟನ್ ಅರೇಹಳ್ಳಿಯಲ್ಲಿ ದಾಂಧಲೆ

• ಪ್ರಜೋದಯ ವರದಿ

**ಅರೇಹಳ್ಳಿ:** ಕ್ಯಾಪ್ಟನ್ ಹೆಸರಿನ ಒಂಟಿ ಸಲಗ ಅರೇಹಳ್ಳಿ ಗ್ರಾಮದೊಳಗೆ ನುಗ್ಗಿ ದಾಂಧಲೆ ನಡೆಸಿ, ಕಾರು ಜಖಂಗೊಳಿಸಿ ಜನರನ್ನು ಅಟ್ಟಾಡಿಸಿರುವ ಘಟನೆ ಬುಧವಾರ ನಡೆದಿದೆ.

ಸಂಜೆ ಏಕಾಏಕಿ ಅರೇಹಳ್ಳಿ ಪಟ್ಟಣದ ಮುಖ್ಯ ರಸ್ತೆಯ ಮೂಲಕ ಜನವಸತಿ ಪ್ರದೇಶಕ್ಕೆ ನುಗ್ಗಿದ ಕಾಡಾನೆ ಕ್ಯಾಪ್ಟನ್, ಗ್ರಾಮದೊಳಗೆ ಓಡಾಡಿ ಗ್ರಾಮಸ್ಥರಲ್ಲಿ ಜೀವನ ಭಯ ಹುಟ್ಟಿಸಿದ್ದು, ಮಾತ್ರವಲ್ಲದೇ ಮನೆಗಳ ಮುಂದೆ ಬಂದು ನಿಂತಿದ್ದರಿಂದ ಜನರು ಬಾಗಿಲು ಮುಚ್ಚಿಕೊಂಡು ಒಳ ಸೇರಿಕೊಳ್ಳುವಂತಾಗಿತ್ತು.ನಾಯಿಗಳು ಬೊಗಳುವ ಸದ್ದು, ಜನರ ಕಿರುಚಾಟದಿಂದ ಕೋಪಗೊಂಡ ಕಾಡಾನೆ, ಮನೆ ಮುಂಭಾಗದಲ್ಲಿ ನಿಲ್ಲಿಸಿದ್ದ ಕಾರನ್ನು ಎತ್ತಿ ಎಸೆದು ನಜ್ಜುಗುಜ್ಜು ಮಾಡಿದೆ. ಗ್ರಾಮದಲ್ಲಿ ಕೆಲ ಕಾಲ ಭಯದ ವಾತಾವರಣ ನಿರ್ಮಾಣವಾಗಿತ್ತು. ಅರಣ್ಯ ಇಲಾಖೆ ಇಟಿಎಫ್ ಮತ್ತು ಆರ್‌ಆರ್‌ಟಿ ಸಿಬ್ಬಂದಿಗೆ ಮಾಹಿತಿ ನೀಡಿದ್ದರಿಂದ ಕಾಡಾನೆ ಮತ್ತೆ ಗ್ರಾಮದೊಳಗೆ ಬಾರದಂತೆ ಎಚ್ಚರ ವಹಿಸಲಾಯಿತು.

ಬೇಲೂರು ತಾಲ್ಲೂಕು ಭಾಗದಲ್ಲಿ ಕಾಡಾನೆ ಕ್ಯಾಪ್ಟನ್ ಉಪಟಳ ಹೆಚ್ಚಾಗಿದ್ದು, ಈ ಹಿಂದೆ ಎರಡು ಬಾರಿ ಸೆರೆ ಹಿಡಿಯಲು ಪ್ರಯತ್ನಿಸಲಾಗಿತ್ತು. ವರ್ಷದ ಹಿಂದೆ ಕರಡಿ ಎಂಬ ಹೆಸರಿನ ಕಾಡಾನೆಯೊಂದಿಗೆ ಮನೆ ಮುಂದೆಯೇ ಕಾಳಗ ನಡೆಸಿ ಜನರಲ್ಲಿ ಭಯ ಸೃಷ್ಟಿಸಿತ್ತು. ಇದಾದ ಬಳಿಕ ಕರಡಿ ಹೆಸರಿನ ಕಾಡಾನೆಯನ್ನು ಸೆರೆ ಹಿಡಿದು ಸಾಕಾನೆ ಶಿಬಿರಕ್ಕೆ ಸಾಗಿಸಲಾಗಿತ್ತು. ಕೆಲ ದಿನಗಳ ಕಾಲ ಅಷ್ಟಾಗಿ ಕಾಣಿಸಿಕೊಳ್ಳದ ಕ್ಯಾಪ್ಟನ್ ಇದೀಗ ಏಕಾಏಕಿ ಗ್ರಾಮದೊಳಗೆ ನುಗ್ಗಿ ದಾಂಧಲೆ ನಡೆಸಿರುವುದು ಜನರಲ್ಲಿ ಆತಂಕ ಸೃಷ್ಟಿ ಮಾಡಿದೆ. ಹೀಗಾಗಿ ಕಾಡಾನೆಯನ್ನು ಸೆರೆಹಿಡಿದು ಸ್ಥಳಾಂತರಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.





# ಹೆಚ್ಚುವರಿ ಅನುದಾನಕ್ಕೆ ಗಡ್ಕರಿಗೆ ಶ್ರೇಯಸ್ ಮನವಿ

• ಪ್ರಜೋದಯ ವರದಿ

**ಹಾಸನ:** ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ-373 ರ ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡುವಂತೆ ಕೋರಿ ಸಂಸದ ಶ್ರೇಯಸ್ ಪಟೇಲ್ ಅವರು ನವದೆಹಲಿಯಲ್ಲಿ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದರು.

ಬೇಲೂರು-ಹಾಸನ ಭಾಗದ (ಪ್ಯಾಕೇಜ್ ) ರಾಷ್ಟ್ರೀಯ ಹೆದ್ದಾರಿ-373ನ್ನು ಚತುಷ್ಪಥ ಮಾರ್ಗವಾಗಿ ವಿಸ್ತರಿಸುವ ಮಹತ್ವದ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ, ತಿದ್ದುಪಡಿಸಿದ ವೆಚ್ಚದ ಅನುದಾನಕ್ಕೆ ಅನುಮೋದನೆ ಘೋಷಿಸುವಂತೆ ಸಚಿವರಲ್ಲಿ ಕೋರಿದರು.

ಈ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು, ತಿದ್ದುಪಡಿ ಮಾಡಿದ ವೆಚ್ಚದ ಅನುದಾನ 723.83 ಕೋ. ರೂ. ಆಗಿದೆ. ಈ ಯೋಜನೆ ಹಾಸನ ಜಿಲ್ಲೆ ಹಾಗು ಕರ್ನಾಟಕ ರಾಜ್ಯದ ಜನರಿಗೆ ಅತ್ಯಂತ ಮುಖ್ಯವಾಗಿದೆ. ಪ್ರಾದೇಶಿಕ ಸಂಪರ್ಕ ಸುಧಾರಿಸುವುದರ ಜೊತೆಗೆ ಬೇಲೂರು-ಹಾಸನ ನಡುವೆ ಸರಕು ಹಾಗು ಪ್ರಯಾಣಿಕರ ವೇಗದ ಸಂಚಾರಕ್ಕೆ ಅನುಕೂಲವಾಗಲಿದೆ. ಶೀಘ್ರ ಅನುದಾನ ಕಲ್ಪಿಸುವಂತೆ ಮನವರಿಕೆ ಜೊತೆಗೆ ಮನವಿ ಮಾಡಿದರು.

ಇದಕ್ಕೂ ಮುನ್ನ ದೆಹಲಿಯಲ್ಲಿರುವ ದೇಶದ 6ನೇ ಪ್ರಧಾನ ಮಂತ್ರಿ ಆಗಿದ್ದ ದಿ.ರಾಜೀವ್‌ಗಾಂಧಿ ಅವರ ಹುಟ್ಟುಹಬ್ಬದ ಅಂಗವಾಗಿ ವೀರಭೂಮಿಯಲ್ಲಿರುವ ಸ್ಮಾರಕಕ್ಕೆ ತೆರಳಿ ಸಂಸದರು ಪುಷ್ಪಗುಚ್ಛ ಇರಿಸಿ ನುಡಿ ನಮನ ಸಲ್ಲಿಸಿದರು.



**24.86 ಕೋಟಿ ರೂ. ಬಿಡುಗಡೆಗೆ ಮನವಿ**

ಕೇಂದ್ರ ನಗರಾಭಿವೃದ್ಧಿ ಸಚಿವ ಮನೋಹರ ಲಾಲ್ ಅವರನ್ನು ಸಂಸದ ಶ್ರೇಯಸ್ ಪಟೇಲ್ ಅವರು ಭೇಟಿಯಾಗಿ, ಪಿಎಂಎವೈಯು ಯೋಜನೆಯಡಿ ನೀಡಬೇಕಾದ 24.86 ಕೋ.ರೂ. ಅನುದಾನ ಬಿಡುಗಡೆ ಮಾಡುವಂತೆ ಕೋರಿದರು.

2015-16ರಿಂದ ಇಲ್ಲಿವರೆಗೆ ಹಾಸನ ಜಿಲ್ಲೆಯ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ-ಅರ್ಬನ್ ಯೋಜನೆಯಡಿ ಮನೆಗಳ ನಿರ್ಮಾಣ ಕಾರ್ಯಗಳು ಪೂರ್ಣಗೊಂಡಿವೆ ಮತ್ತು ಪ್ರಗತಿಯಲ್ಲಿವೆ. ಫಲಾನುಭವಿಗಳಿಗೆ ಇನ್ನು 24.86 ಕೋಟಿ ರೂ. ಅನುದಾನ ನೀಡಬೇಕಿದೆ. ಈ ವಿಳಂಬದಿಂದಾಗಿ ಆರ್ಥಿಕವಾಗಿ ದುರ್ಬಲ ವರ್ಗದ ಅನೇಕ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ತಮ್ಮ ಕನಸಿನ ಮನೆಗಳನ್ನು ಪೂರ್ಣಗೊಳಿಸಲು ನಿರೀಕ್ಷಿತ ನೆರವಿಗಾಗಿ ಕಾಯುತ್ತಿದ್ದಾರೆ. ಕೇಂದ್ರ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಮನವಿ ಸಲ್ಲಿಸಿದರು.

**ಕೃಷಿ ಸಚಿವರ ಭೇಟಿ**

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ಜಿಲ್ಲೆಯ ಅರಸೀಕೆರೆ ಹಾಗು ಹೊಳೆನರಸೀಪುರದಲ್ಲಿನ ಪರಾವಲಂಬಿ ಉತ್ಪಾದನಾ ಪ್ರಯೋಗಾಲಯವನ್ನು ಉನ್ನತೀಕರಣಕ್ಕೆ ಕ್ರಮ ವಹಿಸುವಂತೆ ಕೋರಿದರು.

ಜಿಲ್ಲೆಯಲ್ಲಿ ತೆಂಗು ಪ್ರಮುಖ ಬೆಳೆ ಆಗಿದ್ದು, ಇತ್ತೀಚಿನ ವರ್ಷಗಳಲ್ಲಿ ಕೀಟ ಬಾಧೆಯಿಂದ ಇಳುವರಿ ಕುಸಿದು ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಈ ಹಿನ್ನಲೆ ಅರಸೀಕೆರೆ ಹಾಗು ಹೊಳೆನರಸೀಪುರ ತಾಲ್ಲೂಕುಗಳಲ್ಲಿ ಈಗಿರುವ ಪರಾವಲಂಬಿ ಉತ್ಪಾದನಾ ಪ್ರಯೋಗಾಲಯಗಳನು ಬಲಪಡಿಸಿ, ನವೀಕರಿಸುವುದರಿಂದ ತೆಂಗು ಬೆಳೆ ರಕ್ಷಣೆಗಾಗಿ ಶಾಶ್ವತ, ಪರಿಸರ ಸ್ನೇಹಿ ಹಾಗು ವೆಚ್ಚ-ಸಮರ್ಥ ಕೀಟ ನಿರ್ವಹಣಾ ಪರಿಹಾರಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಈ ಯೋಜನೆಯನ್ನು ಅನುಮೋದಿಸಿ ಅಗತ್ಯ ಆರ್ಥಿಕ ಹಾಗೂ ತಾಂತ್ರಿಕ ಸಹಾಯ ಕಲ್ಪಿಸಬೇಕೆಂದು ಮನವಿ ಮಾಡಿದರು.

# ನಾಳೆ ರಕ್ತದಾನ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ವಿಶ್ವ ಸಹೋದರತ್ವ ದಿನಾಚರಣೆ ಹಾಗು ರಾಜಯೋಗಿನಿ ಪ್ರಕಾಶಮಣಿ ಜೀ ಅವರ ಸ್ಮರಣಾರ್ಥ ನಗರದ ಸೀತಾರಾಂಜನೇಯ ದೇವಸ್ಥಾನದ ಆವರಣದಲ್ಲಿ ಆ.22 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ರಕ್ತದಾನ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಶಂಕರೀಪುರಂ ಸೇವಾ ಕೇಂದ್ರದ ಬ್ರಹ್ಮ ಕುಮಾರಿಸ್ ಬಿ.ಕೆ.ಶ್ವೇತಾ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಶ್ವರಿ ವಿಶ್ವವಿದ್ಯಾಲಯದಿಂದ ಆ.25 ವಿಶ್ವ ಸಹೋದರತ್ತ ದಿನಾಚರಣೆಯ ವೇಳೆ ಮತ್ತು ನಮ್ಮ ಸಂಸ್ಥೆಯ ಪೂರ್ವ ಆಡಳಿತಧಿಕಾರಿ ಪ್ರಕಾಶಮಣಿ ಅವರ 18ನೇ ಪುಣ್ಯ ಸ್ಮರಣೆ ಅಂಗವಾಗಿ ಇಡೀ ವಿಶ್ವದಲ್ಲೇ ಬೃಹತ್ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರ ನೇಪಾಳ ಹಾಗು ಭಾರತಾದ್ಯಂತ ನಡೆಯುತ್ತಿದೆ ಎಂದರು.

ರಕ್ತಕ್ಕೆ ಬದಲಾಗಿ ಪರ್ಯಾಯ ವಸ್ತು ಯಾವುದು ಇಲ್ಲ. ರಕ್ತದಾನ ಎಂಬುದು ಮನುಷ್ಯನಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲದಂತಹ ಅಮೂಲ್ಯ ಉಡುಗೊರೆ. ಹಾಗಾಗಿ 18 ವರ್ಷಕ್ಕೆ ಮೇಲ್ಪಟ್ಟವರು ರಕ್ತದಾನಕ್ಕೆ ಸಹಕರಿಸಿ ಮಾನವ ಸೇವೆ ಮುಂದಾಗುವಂತೆ ಕೋರಿದ ಅವರು, ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 8618163651 ಗೆ ಸಂಪರ್ಕಿಸಬಹುದೆಂದು ತಿಳಿಸಿದರು.

# ಭಾರತದ ಸರಕುಗಳಿಗೆ ರಷ್ಯಾ ಮುಕ್ತ ಆಹ್ವಾನ

• ಪ್ರಜೋದಯ ವರದಿ

**ನವದೆಹಲಿ:** ಅಮೇರಿಕದ ಮಾರುಕಟ್ಟೆಯಲ್ಲಿ ಭಾರತದ ಸರಕುಗಳಿಗೆ ಪ್ರವೇಶ ಸಿಗುವುದು ಕಷ್ಟವೆನಿಸಿದಲ್ಲಿ ರಷ್ಯಾ ಮಾರುಕಟ್ಟೆಗೆ ಬರಬಹುದು ಎಂದು ಭಾರತದಲ್ಲಿರುವ ರಷ್ಯನ್ ರಾಯಭಾರ ಕಚೇರಿ ಅಧಿಕಾರಿ ರೋಮನ್ ಬಾಬುಶ್‌ಕಿನ್ ಹೇಳಿದ್ದಾರೆ. ರಷ್ಯನ್ ತೈಲವನ್ನು ಖರೀದಿಸುತ್ತಿರುವ ಕಾರಣಕ್ಕೆ ಭಾರತದ ಮೇಲೆ ಶೇ. 50ರಷ್ಟು ಟ್ಯಾರಿಫ್ ಹಾಕಿದ ಅಮೇರಿಕದ ವರ್ತನೆಯನ್ನು ಬಾಬುಶ್‌ಕಿನ್ ಖಂಡಿಸಿದ್ದು, ಅದು ಹೊಸ ವಸಾಹತುಶಾಹಿ ವರ್ತನೆ ಎಂದು ಜರಿದಿದ್ದಾರೆ.

ಯಾವುದೇ ಏಕಪಕ್ಷೀಯ ನಿರ್ಧಾರಗಳು ಸರಬರಾಜು ಸರಪಳಿಗೆ ಧಕ್ಕೆ ತರುತ್ತವೆ. ಅಭಿವೃದ್ಧಿಶೀಲ ದೇಶಗಳ ಇಂಧನ ಭದ್ರತೆಗೆ ಅಪಾಯ ತರುತ್ತವೆ. ಪಾಶ್ಚಿಮಾತ್ಯ ಶಕ್ತಿಗಳ ವರ್ತನೆ ಹೊಸ ವಸಾಹತುಶಾಹಿ ಧೋರಣೆಯಂತಿದೆ. ಭಾರತದ ಮೇಲೆ ಅವು ಹಾಕುತ್ತಿರುವ ಒತ್ತಡ ನ್ಯಾಯಯುತ ಅಲ್ಲ ಎಂದು ರಷ್ಯನ್ ರಾಯಭಾರ ಅಧಿಕಾರಿ ಅಭಿಪ್ರಾಯಪಟ್ಟಿದ್ದಾರೆ.



ಇನ್ನೂ ಮುಂದುವರಿದ ಅವರು, ಭಾರತವು ರಷ್ಯನ್ ತೈಲ ಖರೀದಿಸುವುದಕ್ಕೂ ಪಾಶ್ಚಿಮಾತ್ಯ ದೇಶಗಳ ವರ್ತನೆಗೂ ಸಂಬಂಧ ಇಲ್ಲ ಎಂದು ಬೇರಾವುದೋ ಮಸಲತ್ತಿನ ವಾಸನೆಯನ್ನು ಬಾಬುಶ್‌ಕಿನ್ ಗ್ರಹಿಸಿದ್ದಾರೆ.

**ಎಎನ್‌ಐನಿಂದ ಎಕ್ಸ್ ಪೋಸ್ಟ್**

ಒಂದು ವೇಳೆ ಭಾರತವು ರಷ್ಯನ್ ತೈಲ ಖರೀದಿಸುವುದನ್ನು ನಿಲ್ಲಿಸಿತೆನ್ನಿ. ಇದರಿಂದ ಪಾಶ್ಚಿಮಾತ್ಯ ಶಕ್ತಿಯೊಂದಿಗೆ ಸಮಾನ ಸಹಕಾರ ಸಿಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ, ಈ ಪಶ್ಚಿಮದ ಸ್ವಭಾವವೇ ಅಂಥದ್ದು. ಇತ್ತೀಚಿನ ವರ್ಷಗಳಲ್ಲಿ ಇದು ಬಹಳ ಸ್ಪಷ್ಟವಾಗಿದೆ ಎಂದು ರೋಮನ್ ಬಾಬುಶ್‌ಕಿನ್ ಅವರು ಅಮೇರಿಕದ ನೀತಿಯನ್ನು ಕುಟುಕಿದ್ದಾರೆ.

### ರಿಯಾಯಿತಿ ಘೋಷಿಸಿದ ಮಿತ್ರ ರಾಷ್ಟ್ರ

ಅಮೆರಿಕ ಮತ್ತು ಭಾರತದ ನಡುವೆ ವ್ಯಾಪಾರ ಸಮರ ತೀವ್ರಗೊಂಡಿದೆ. ಟ್ರಂಪ್ ಭಾರತದ ಮೇಲೆ ನಿರ್ಬಂಧ ಹೇರಿದ್ದು, ರಷ್ಯಾದಿಂದ ಕಚ್ಚಾತೈಲ ಖರೀದಿಸದಂತೆ ಒತ್ತಡ ಹೇರುತ್ತಿದ್ದಾರೆ. ಇದರ ನಡುವೆಯೂ ರಷ್ಯಾವು ಭಾರತಕ್ಕೆ ಶೇ. 5ರಷ್ಟು ರಿಯಾಯಿತಿ ದರದಲ್ಲಿ ಕಚ್ಚಾತೈಲವನ್ನು ಪೂರೈಸುವುದನ್ನು ಮುಂದುವರಿಸಲಿದೆ. ಭಾರತದಲ್ಲಿನ ರಷ್ಯಾದ ಉಪ ವ್ಯಾಪಾರ ಪ್ರತಿನಿಧಿ ಎವ್ಗೆನಿ ಗ್ರೀವಾ ಈ ವಿಷಯವನ್ನು ಖಚಿತಪಡಿಸಿದ್ದಾರೆ. ಭಾರತಕ್ಕೆ ರಷ್ಯಾದ ಕಚ್ಚಾತೈಲ ಖರೀದಿಯ ಮೇಲೆ ಸುಮಾರು ಶೇ. 5ರಷ್ಟು ರಿಯಾಯಿತಿ ಇರಲಿದೆ. ರಾಜಕೀಯ ಪರಿಸ್ಥಿತಿ ಏನೇ ಇರಲಿ, ಭಾರತವು ಮೊದಲಿನಷ್ಟೇ ಪ್ರಮಾಣದ ತೈಲವನ್ನು ಆಮದು ಮಾಡಿಕೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.
ರಿಯಾಯಿತಿಯ ವಿಚಾರವು ಉದ್ಯಮಿಗಳ ನಡುವಿನ ವಾಣಿಜ್ಯ ಮಾತುಕತೆಯಾಗಿದ್ದು, ಇದು ಸಾಮಾನ್ಯವಾಗಿ ಹೆಚ್ಚು ಕಡಿಮೆಯಾಗುತ್ತಿರುತ್ತದೆ ಎಂದು ಅವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದಾರೆ.
ರಷ್ಯಾದ ಉಪ ರಾಯಭಾರಿ ರೋಮನ್ ಬಾಬುಶ್ಕಿನ್ ಮಾತನಾಡಿ, ಇದು ಭಾರತದ ಪಾಲಿಗೆ ಸವಾಲಿನ ಪರಿಸ್ಥಿತಿಯಾದರೂ, ನಮ್ಮ ಸಂಬಂಧಗಳ ಮೇಲೆ ನಮಗೆ ನಂಬಿಕೆ ಇದೆ. ಬಾಹ್ಯ ಒತ್ತಡಗಳ ನಡುವೆಯೂ ಭಾರತ-ರಷ್ಯಾ ಇಂಧನ ಸಹಕಾರ ಮುಂದುವರಿಯುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಅಮೆರಿಕ ಟೀಕಿಸುತ್ತಿದೆ ಎಂದರೆ ನೀವು ಸರಿಯಾಗಿದ್ದೀರಿ ಎಂದರ್ಥ**

ಭಾರತವು ರಷ್ಯಾದಿಂದ ತೈಲ ಖರೀದಿಸೋದನ್ನು ನಿಲ್ಲಿಸಬಹುದು ಅಂತ ಅನಿಸೋದಿಲ್ಲ. ತಮಗೆ ಭಾರತ ಎದುರಿಸುತ್ತಿರುವ ಸಮಸ್ಯೆ ಏನು ಎಂದು ಗೊತ್ತಿದೆ ಎಂದು ರಷ್ಯನ್ ರಾಜತಾಂತ್ರಿಕ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಪಾಶ್ಚಿಮಾತ್ಯ ಶಕ್ತಿಗಳು ನಿಮ್ಮನ್ನು ಟೀಕಿಸುತ್ತಿವೆ ಎಂದರೆ ನೀವು ಸರಿಯಾದ ಕೆಲಸವನ್ನೇ ಮಾಡುತ್ತಿದ್ದೀರಿ ಎಂದರ್ಥ. ಏನೇ ಆಗಲಿ, ಯಾವುದೇ ಸವಾಲು ಎದುರಾಗಲಿ ನಾವು ಯಾವುದೇ ಸಮಸ್ಯೆಗಳನ್ನು ನಿವಾರಿಸಲು ಬದ್ಧರಾಗಿದ್ದೇವೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಮೋದಿಜಿ ಅವರಿಗೆ ಪುಟಿನ್ ಫೋನ್ ಕರೆ ಮಾಡಿ ಮಾಹಿತಿ ಹಂಚಿಕೊಂಡಿದ್ದಾರೆ. ರಷ್ಯಾಗೆ ಭಾರತ ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸುತ್ತದೆ. ಇಬ್ಬರಿಗೂ ತೃಪ್ತಿಯಾಗುವ ರೀತಿಯಲ್ಲಿ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಮರ್ಥರಾಗಿದ್ದೇವೆ ಎಂದು ರೋಮನ್ ಬಾಬುಶ್‌ಕಿನ್ ತಿಳಿಸಿದ್ದಾರೆ.

# ಗಣೇಶೋತ್ಸವ: ಡಿಜೆ ಬಳಕೆಗೆ ನಿಷೇಧ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ ಗಣೇಶೋತ್ಸವದ ಸಂದರ್ಭದಲ್ಲಿ ಡಿಜೆ ಬಳಕೆಗೆ ಮಾತ್ರ ಸರ್ಕಾರದಿಂದ ನಿಷೇಧವಿದ್ದು, ಧ್ವನಿವರ್ಧಕ ಬಳಕೆಗೆ ಯಾವುದೇ ರೀತಿಯ ನಿರ್ಬಂಧವಿಲ್ಲ ಎಂದು ಡಿ.ವೈ.ಎಸ್.ಪಿ. ಪ್ರಮೋದ್ ಕುಮಾರ್ ಹೇಳಿದರು.

ಪಟ್ಟಣದ ರೈತ ಭವನದಲ್ಲಿ ಗಣೇಶೋತ್ಸವ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಆಯೋಜಕರ ಸಭೆಯಲ್ಲಿ ಅವರು ಮಾತನಾಡಿ, ಸರ್ಕಾರ ಅನುಮತಿಸದ ಡಿಜೆ ಹೊರತುಪಡಿಸಿ ಇತರ ಧ್ವನಿವರ್ಧಕ ಹಾಗೂ ವಾದ್ಯವೃಂದಗಳ ಮೂಲಕ ಉತ್ಸವ ಆಚರಿಸಿಕೊಳ್ಳಬಹುದು. ಇದಕ್ಕೆ ಪೊಲೀಸ್ ಇಲಾಖೆ ಯಾವುದೇ ಅಡಚಣೆ ಮಾಡುವುದಿಲ್ಲ, ಆದರೆ ಸರ್ಕಾರ ವಿಧಿಸಿರುವ ಮಾನದಂಡಗಳ ಪ್ರಕಾರವೇ ಅನುಮತಿಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಉತ್ಸವ ನಡೆಯುವ ಸ್ಥಳದಲ್ಲಿ ಆಯೋಜಕರು ಸ್ವತಃ ಮುಂಜಾಗ್ರತಾ ಕ್ರಮವಾಗಿ ಸಿಸಿ ಕ್ಯಾಮೆರಾ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ಉತ್ಸವದ ಆವರಣದಲ್ಲಿ ಧ್ವನಿವರ್ಧಕ ಬಳಸಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಯಾವುದೇ ನಿಷೇಧವಿರುವುದಿಲ್ಲ. ಹಬ್ಬ ಆಚರಣೆಗಳು ನಮಗೆ ಸಂತೋಷ ನೀಡಬೇಕು, ಹೊರತು ಇತರರಿಗೆ ತೊಂದರೆ ಉಂಟು ಮಾಡಬಾರದು. ವಿಸರ್ಜನೆ ವೇಳೆ ಅನಾಹುತಗಳನ್ನು ತಪ್ಪಿಸಲು ಆಯೋಜಕರು ಸ್ವತಃ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಡಿಜೆ ಬಳಕೆಗೆ ಮಾತ್ರ ನಿಷೇಧವಿದ್ದು, ಮುಂದಿನ ದಿನಗಳಲ್ಲಿ ಸರ್ಕಾರ ಡಿಜೆ ಬಳಕೆಗೆ ಅನುಮತಿ ನೀಡಿದರೆ ನಮಗೆ ಯಾವುದೇ ತಕರಾರು ಇಲ್ಲ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಮಹೇಶ್, ಗ್ರಾಮಾಂತರ ಠಾಣೆಯ ಪಿಎಸ್‌ಐ ಪ್ರಸನ್ನ, ಟಿಎಪಿಸಿಎಂಎಸ್ ಅಧ್ಯಕ್ಷ ಶಶಿಕುಮಾರ್, ಪಿಎಸ್‌ಐ ಸರ್ದಾರ್ ಪಾಷಾ, ಯಸಳೂರು ಪಿಎಸ್‌ಐ ಶ್ರೀನಿವಾಸ್, ಚೆಸ್ಕಾಂ ಸಹಾಯಕ ಅಭಿಯಂತರ ಹರೀಶ್, ಆನೆಮಹಲ್ ಗ್ರಾಮ ಪಂಚಾಯಿತಿ ಪಿಡಿಒ ವೇಣು ಇನ್ನಿತರರು ಉಪಸ್ಥಿತರಿದ್ದರು.

## ವಿಶ್ವ ಛಾಯಾಗ್ರಾಹಕರ ದಿನಾಚರಣೆ




• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕು ವೃತ್ತಿನಿರತ ಛಾಯಾಗ್ರಾಹಕರ ಸಂಘದ ವತಿಯಿಂದ ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಮಂಗಳವಾರ ಇಲ್ಲಿಯ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಾಗೂ ಸಿಹಿ ಹಂಚಿದರು.

ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಅರುಣ್‌ಕುಮಾರ್, ಛಾಯಾಗ್ರಾಹಕರು ಹಾಗೂ ಮತ್ತಿತರರು ಹಾಜರಿದ್ದರು.

# ದೇವರಾಜ ಅರಸು ಅವರ ನಾಯಕತ್ವ ಗುಣ ಬೆಳೆಸಿಕೊಳ್ಳಿ: ಜಿಲ್ಲಾಧಿಕಾರಿ

» ಮೊದಲನೇ ಪುಟದಿಂದ

ಮೂಲಕ ಆಚರಿಸುವುದಷ್ಟೇ ಅಲ್ಲದೆ ಅವರ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದುವರೆದರೆ ಅದೇ ಅವರಿಗೆ ನೀಡುವ ಬಹುದೊಡ್ಡ ಗೌರವವಾಗಿದೆ ಎಂದು ತಿಳಿಸಿದರು.

ಸಾಹಿತಿ ಎಂ.ಜಿ.ಪರಮೇಶ್ ಮಡಬಲು ಮಾತನಾಡಿ, ಎರಡು ಬಾರಿ ಮುಖ್ಯಮಂತ್ರಿಯಾಗಿ, ದೀನದಲಿತರ ಹಿಂದುಳಿದ ವರ್ಗಗಳ, ಶೋಷಿತ ಸಮುದಾಯದವರ, ಅಲ್ಪಸಂಖ್ಯಾತರ, ರೈತರ, ಕೂಲಿ ಕಾರ್ಮಿಕರ ಆಶಾಕಿರಣವಾಗಿ ಈ ರಾಜ್ಯಕ್ಕೆ ಭದ್ರಬುನಾದಿ ಹಾಕಿದವರು. ಗ್ರಾಮೀಣ ಹಳ್ಳಿಯಲ್ಲಿ ಹುಟ್ಟಿ ಬಡತನದ ಹಾದಿಯನ್ನು ಎದುರಿಸಿ ಬೆಳೆದು ಬಂದವರಾಗಿದ್ದಾರೆ. ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಹೆಚ್ಚಿನ ಅಂತರದಲ್ಲಿ ಆಯ್ಕೆಯಾಗಿ ರಾಜಕೀಯ ಕ್ಷೇತ್ರಕ್ಕೆ ಧುಮುಕಿದವರು ದೇವರಾಜು ಅರಸು ಎಂದು ತಿಳಿಸಿದರು.

ಶ್ರೇಷ್ಠ ಗರಡಿ ಪಟು ಹಾಗೂ ಪುಸ್ತಕ ಪ್ರೇಮಿಯೂ ಆಗಿದ್ದರು. ಸಾಹಿತ್ಯ, ಸಂಸ್ಕೃತಿಯು ಪ್ರಗತಿ ಆಗಬೇಕೆಂಬ ಕನಸನ್ನು ಕಂಡಿದ್ದರು. ಎಲ್.ಜಿ.ಹಾವನೂರು ವರದಿಯನ್ನು ಜಾರಿಗೆ ತಂದವರು, ಜೀತ ಪದ್ಧತಿ ನಿರ್ಮೂಲನೆ ಮಾಡಲು ಹೋರಾಡಿದವರು, ಗುಡಿಸಲು ಮುಕ್ತ ಹಳ್ಳಿಗಳನ್ನು ಮಾಡಿದವರು, ಪ್ರತಿ ಮನೆಗೆ ಬೆಳಕನ್ನು ನೀಡಲು ಭಾಗ್ಯ ಜ್ಯೋತಿ ಯೋಜನೆಯನ್ನು ಜಾರಿಗೆ ತಂದವರು, ಪದವೀಧರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಆರಂಭಿಸಿದವರು. ಹೀಗೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಸಮಾಜಕ್ಕೆ ಕೊಡುಗೆ ನೀಡಿದಂತಹ ಮಹಾನ್ ವ್ಯಕ್ತಿ ಡಿ.ದೇವರಾಜು ಅರಸು ಜೀವನದ ಕುರಿತಾಗಿ ವಿವರವಾಗಿ ಉಪನ್ಯಾಸ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಕುಮಾರ್, ಸಂದೇಶ್ ಹಾಜರಿದ್ದರು. ವಿವಿಧ ಶಾಲಾ-ಕಾಲೇಜುಗಳ, ವಸತಿ ನಿಲಯದ ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಿದ್ದರು.

**ಜಾಥಾಗೆ ಚಾಲನೆ:**

ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುವಾಗ ಹಲವಾರು ಜನಪರ ಕೆಲಸಗಳನ್ನು ಮಾಡಿದವರು, ಉಳುವವನಿಗೆ ಭೂಮಿಯನ್ನು ನೀಡುವ ಮೂಲಕ ಲಕ್ಷಾಂತರ ಮನೆಗಳಿಗೆ ಬೆಳಕಾಗಿ ಬಂದವರು ಡಿ.ದೇವರಾಜು ಅರಸು ಅವರು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದ್ದಾರೆ.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿಂದು ಆಯೋಜಿಸಿದ್ದ ಸಾಮಾಜಿಕ ಕ್ರಾಂತಿಯ ನೇತಾರ, ಪರಿವರ್ತನೆಯ ಹರಿಕಾರ ಹಾಗೂ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯಲ್ಲಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಮೆರವಣಿಗೆ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದುಳಿದ ವರ್ಗದವರು, ದಲಿತ ವರ್ಗದವರು ಹೀಗೆ ಎಲ್ಲರನ್ನೂ ಮುನ್ನೆಲೆಗೆ ತರುವ ಪ್ರಯತ್ನ ಮಾಡಿದವರು ಅರಸು. ಇಂದು ಅವರು ಹಾಕಿಕೊಟ್ಟ ದಾರಿಯೇ ನಮಗೆಲ್ಲ ಬೆಳಕಾಗಿದೆ ಎಂದು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಕುಮಾರ್ ಮತ್ತಿತರರು ಹಾಜರಿದ್ದರು.

# ನೊಂದವರ ಬದುಕಿಗೆ ಬೆಳಕಾದವರು ದೇವರಾಜ್ ಅರಸು

• ಪ್ರಜೋದಯ ವರದಿ

**ಸಕಲೇಶಪುರ:** ನೊಂದವರ ಬದುಕಿಗೆ ಬೆಳಕಾದವರು ಮಾಜಿ ಮುಖ್ಯಮಂತ್ರಿ ದೇವರಾಜ್ ಅರಸು ಎಂದು ಉಪ ವಿಭಾಗಾಧಿಕಾರಿ ರಾಜೇಶ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ದೇವರಾಜ್ ಅರಸುರವರ 110ನೇ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವತಂತ್ರ ಭಾರತದಲ್ಲಿ ಹಿಂದುಳಿದ ವರ್ಗದಿಂದ ಆಯ್ಕೆಯಾದ ಮೊದಲ ಮುಖ್ಯಮಂತ್ರಿ ದೇವರಾಜ್ ಅರಸು. ತಮ್ಮ ಆಡಳಿತಾವಧಿಯಲ್ಲಿ ದಿನದಲಿತರ ಪರವಾಗಿ ಕೆಲಸ ಮಾಡಿದ ಪರಿಣಾಮ ಲಕ್ಷಾಂತರ ಜನರು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು. ಅಧಿಕಾರ ದೊರೆತ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಸೇವೆ ಸಲ್ಲಿಸಬೇಕು ಎಂಬುದಕ್ಕೆ ಮಾರ್ಗದರ್ಶನ ನೀಡಿದವರು ದೇವರಾಜ್ ಅರಸರು. ಇಂದಿನ ಯುವಜನತೆ ಅವರ ಬದುಕನ್ನು ಆದರ್ಶವನ್ನಾಗಿ ಪಾಲಿಸಬೇಕು ಎಂದರು.




ತಹಸೀಲ್ದಾರ್ ಸುಪ್ರೀತಾ ಮಾತನಾಡಿ, ದಕ್ಷಿಣ ಭಾರತದಲ್ಲಿ ಶ್ರೀಮಂತ-ಬಡವರ ಅಂತರವನ್ನು ಕಡಿಮೆ ಮಾಡಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು ದೇವರಾಜ್ ಅರಸರು. ದೇಶದ ಕಮ್ಯೂನಿಸ್ಟ್ ಆಡಳಿತವಿದ್ದ ಪಶ್ಚಿಮ ಬಂಗಾಳ ಮತ್ತು ಕೇರಳ ಹೊರತುಪಡಿಸಿ, ಉಳಿದ ರಾಜ್ಯಗಳಲ್ಲಿ ಒಡೆಯ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮುಖ್ಯಮಂತ್ರಿ ದೇವರಾಜ್ ಅರಸರು. ಆರ್ಥಿಕವಾಗಿ ಹಿಂದುಳಿದ ಎಲ್ಲ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಸತಿ ನಿಲಯಗಳನ್ನು ಸ್ಥಾಪಿಸಿ ಕೋಟ್ಯಾಂತರ ಜನರ ಬದುಕಿಗೆ ಬೆಳಕಾದವರು ದೇವರಾಜ್ ಅರಸರು. ಉಚಿತವಾಗಿ ಸೌಲಭ್ಯ ದೊರಕಿದರೂ ಶಿಕ್ಷಣವನ್ನು ನಾವು ಸ್ವತಃ ಸಂಪಾದಿಸಬೇಕು ಎಂಬ ಅವರ ನಾಣ್ಣುಡಿಯನ್ನು ಪಾಲಿಸಬೇಕು ಎಂದು ತಿಳಿಸಿದರು.

ಸಂಪನ್ಮೂಲ ಅಧಿಕಾರಿ ಸಿದ್ದೇಶ್ ಅವರು ದೇವರಾಜ್ ಅರಸುರವರ ಆದರ್ಶಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ಪ್ರಮೋದ್ ಕುಮಾರ್, ಹಿಂದುಳಿದ ವರ್ಗಗಳ ಇಲಾಖೆಯ ಬಸವನಗೌಡ ಪಾಟೀಲ್, ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಎಸ್.ಜಿ. ಲೋಕೇಶ್, ಗ್ರೇಡ್-2 ತಹಸೀಲ್ದಾರ್ ಮೋಹನ್, ತಾಲ್ಲೂಕು ಪಂಚಾಯತ್ ಸಹಾಯಕ ನಿರೀಕ್ಷಣಾಧಿಕಾರಿ ಹರೀಶ್ ಮುಂತಾದವರು ಉಪಸ್ಥಿತರಿದ್ದರು.

## ದಿಶಾ ಸಭೆ ಮುಂದೂಡಿಕೆ

• ಪ್ರಜೋದಯ ವರದಿ

**ಹಾಸನ:** ಸಂಸದ ಶ್ರೇಯಸ್ ಎಂ. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಆ.25 ರಂದು ಬೆಳಿಗ್ಗೆ 11 ಕ್ಕೆ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ (ದಿಶಾ) ಸಭೆಯನ್ನು ಹಾಸನ ಜಿಲ್ಲಾ ಪಂಚಾಯತ್, ಹೊಯ್ಸಳ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಅನಿವಾರ್ಯ ಕಾರಣಗಳಿಂದ ಸಭೆಯನ್ನು ಮುಂದೂಡಲಾಗಿರುತ್ತದೆ. ಮುಂದಿನ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ದಿನಾಂಕವನ್ನು ತಿಳಿಸಲಾಗುವುದೆಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶೇ.50 ರಷ್ಟು ಕಾಫಿ ಬೆಳೆ ಹಾನಿ: ಪರಿಹಾರಕ್ಕೆ ಆಗ್ರಹ

» ಮೊದಲನೇ ಪುಟದಿಂದ

ಮುಂದುವರಿಕೆಯಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ಬೆಳೆಯಲ್ಲಿ ನಷ್ಟ ಉಂಟಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ತೀವ್ರ ಕ್ರಮ ಕೈಗೊಂಡು ಅಧಿಕಾರಿಗಳಿಂದ ವರದಿ ಪಡೆದು ಬೆಳೆಗಾರರಿಗೆ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಮನವಿ ಮಾಡಿದರು.

**ಯೂರಿಯಾ ಕೊರತೆ**

ಕರ್ನಾಟಕ ಬೆಳೆಗಾರರ ಸಂಘದ ಅಧ್ಯಕ್ಷ ಹೆಚ್.ಬಿ.ಶಿವಣ್ಣ ಅವರು ಮಾತನಾಡಿ, ಮರ ಗಿಡಗಳ ಆಶ್ರಯದಲ್ಲಿ ಬೆಳೆಯುವ ಕಾಫಿ ತೋಟಗಳಲ್ಲಿ ಮರಗಳ ಎಲೆಗಳಿಂದ ಅತೀ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರ ಭೂಮಿಗೆ ದೊರೆಯುತ್ತಿದೆ. ಇದರ ಜೊತೆಗೆ ಕಾಫಿ ತೋಟಗಳಲ್ಲಿ ರಸಗೊಬ್ಬರ ಬಳಕೆ ಅತಿಮುಖ್ಯವಾಗಿದೆ. ತೋಟಗಳಲ್ಲಿ ಸಿಂಪಡಣೆ ಮೂಲಕ ರಸಗೊಬ್ಬರ ಪೂರೈಕೆ ಕಷ್ಟಸಾಧ್ಯವಾಗಿದ್ದು, ಬುಡಕ್ಕೆ ರಸಗೊಬ್ಬರ ಹಾಕುವುದು ಅನಿವಾರ್ಯವಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಯೂರಿಯಾ ಗೊಬ್ಬರವನ್ನು ಸಾಮಾನ್ಯವಾಗಿ ಬಳಕೆ ಮಾಡಲಾಗುತ್ತಿದೆ. ಈ ಸಾಲಿನಲ್ಲಿ ಯೂರಿಯಾ ಗೊಬ್ಬರದ ಕೊರತೆ ಹೆಚ್ಚಾಗಿ ಕಂಡು ಬಂದಿದೆ. ಹಾಗಾಗಿ ಸರ್ಕಾರ ಬೆಳೆಗಾರರ ನೆರವಿಗೆ ಧಾವಿಸಿ ಯೂರಿಯಾ ಗೊಬ್ಬರವನ್ನು ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು. ಬೆಳೆಗಾರರ ಸಂಘದ ಉಪಾಧ್ಯಕ್ಷ ಬಿ.ಎಂ.ನಾಗರಾಜು, ಎ.ಎಸ್. ಪರಮೇಶ್, ಗಂಗಾಧರ್, ಯತೀಶ್, ಕೆ.ಬಿ.ಲೋಹಿತ್ ಇದ್ದರು.

**ಹಾಸನ: ನಗರದ ವಾರ್ಡ್ ನಂ.30ರ ವಿಶ್ವನಾಥನಗರದ ಗದ್ದೆಹಳ್ಳ 8ನೇ ಕ್ರಾಸ್‌ನಲ್ಲಿ ಮಹಾನಗರ ಪಾಲಿಕೆಯ 18 ಲಕ್ಷ ರೂ. ಅನುದಾನದಲ್ಲಿ ಒಳ ಚರಂಡಿ ನಿರ್ಮಾಣ ಕಾಮಗಾರಿಗೆ ಪಾಲಿಕೆ ಸದಸ್ಯ ಸಿ.ಕ್ರಾಂತಿ ಪ್ರಸಾದ್ ತ್ಯಾಗಿ ಅವರು ಭೂಮಿ ಪೂಜೆ ನೆರವೇರಿಸಿದರು.**



## ಸೌರಗ್ರಾಮ ಯೋಜನೆ ಅನುಷ್ಠಾನಕ್ಕೆ 1 ಕೋ.ರೂ.

• ಪ್ರಜೋದಯ ವರದಿ

**ಹಾಸನ:** ಮಾದರಿ ಸೌರಗ್ರಾಮ ಯೋಜನೆಯಡಿಯಲ್ಲಿ ಭಾರತ ಸರ್ಕಾರ ಸೌರ ವಿದ್ಯುತ್ ಉತ್ಪಾದನೆಯ ಪಾಲನ್ನು ಹೆಚ್ಚಿಸುವ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಹಾಸನ ಜಿಲ್ಲೆಯ 08 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಎಂಎನ್‌ಆರ್‌ಇ ಮಾದರಿ ಸೂಚಿಯಂತೆ ಪ್ರತಿ ಜಿಲ್ಲೆಯಲ್ಲಿ 5 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಹಾಲಿ ವಿದ್ಯುತ್ ಜಾಲದಿಂದ ಸಂಪರ್ಕ ಹೊಂದಿರುವ ಕಂದಾಯ ಗ್ರಾಮಗಳು ಸ್ಪರ್ಧಿಸುವ ಅವಕಾಶ ಇರುವುದರಿಂದ ಬೇಲೂರು ತಾಲೂಕಿನ ಹಳೇಬೀಡು, ಚನ್ನರಾಯಪಟ್ಟಣ ತಾಲೂಕಿನ ಶ್ರವಣಬೆಳಗೊಳ, ಹಿರೀಸಾವೆ ಅರಸೀಕೆರೆ ತಾಲ್ಲೂಕಿನ ಬಾಣಾವರ, ಜಾವಗಲ್, ಹಾರನಹಳ್ಳಿ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಮತ್ತು ಅರಕಲಗೂಡು ತಾಲ್ಲೂಕಿನ ಕೊಣನೂರು ಗ್ರಾಮಗಳನ್ನು ಪೊಟೆನ್ಸಿಯಲ್ ಕ್ಯಾಂಡಿಡೇಟ್ ಗ್ರಾಮಗಳಾಗಿ ಗುರುತಿಸಲಾಗಿದೆ.

ಪೊಟೆನ್ಸಿಯಲ್ ಕ್ಯಾಂಡಿಡೇಟ್ ಗ್ರಾಮಗಳಾಗಿ ಆಯ್ಕೆಯಾಗಿರುವ ಗ್ರಾಮಗಳಿಗೆ 2025 ರ ಜುಲೈ 01 ರಿಂದ 6 ತಿಂಗಳ ಅವಧಿ (31-12-2025) ನೀಡಲಾಗಿದ್ದು, ಈ ಅವಧಿಯಲ್ಲಿ ವಿವಿಧ ಯೋಜನೆಗಳನ್ನು ಗರಿಷ್ಠ ಮಟ್ಟದಲ್ಲಿ ಅನುಷ್ಠಾನಗೊಳಿಸಿ ಹೆಚ್ಚಿನ ನವೀಕರಿಸಬಹುದಾದ ಸೌರವಿದ್ಯುತ್ ಉತ್ಪಾದನೆಯ ಗುರಿಯನ್ನು ಸಾಧಿಸುವ ಗ್ರಾಮವನ್ನು ಮಾದರಿ ಸೌರಗ್ರಾಮ ಎಂದು ಆಯ್ಕೆ ಮಾಡಲಾಗುವುದು. ಆಯ್ಕೆ ಆಗುವ ಮಾದರಿ ಸೌರಗ್ರಾಮಕ್ಕೆ ರೂ. 1 ಕೋಟಿ ಕೇಂದ್ರಿಯ ಹಣಕಾಸಿನ ಸಹಾಯ (ಸಿಎಫ್‌ಎ) ಅನುದಾನ ನೀಡಲಾಗುವುದು. ಈ ಚಟುವಟಿಕೆಗಳನ್ನು ಆಯಾಯ ಪಂಚಾಯತ್ ಕಾರ್ಯದರ್ಶಿಗಳ ನೇತೃತ್ವದಲ್ಲಿ ಗ್ರಾಮ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ರಚಿಸಲಾಗುವುದು.

ಈ ಹಿನ್ನಲೆಯಲ್ಲಿ ಜನಸಾಮಾನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರ ಸರ್ಕಾರದಿಂದ ಹೊರಡಿಸಿರುವ ಪಿ.ಎಂ.ಸೂರ್ಯ ಘರ್-ಮುಫ್ತ್ ಬಿಜಲಿ ಯೋಜನೆ, ಕುಸುಮ-ಬಿ, ಕುಸುಮ-ಸಿ ಯೋಜನೆಗಳ ವಿದ್ಯುತ್ ಸವಲತ್ತುಗಳನ್ನು ಪಡೆಯುವುದು. ಮುಂದುವರೆದು ಈ ನಿಟ್ಟಿನಲ್ಲಿ ಪಂಚಾಯತ್‌ಗಳು ನಿರೀಕ್ಷಿತ ಫಲಾನುಭವಿಗಳು, ಬ್ಯಾಂಕ್‌ಗಳು, ಅನುಮೋದನೆ ಹೊಂದಿರುವ ಮಾರಾಟಗಾರರ ನಡುವೆ ಸಂಪರ್ಕಕಲ್ಪಿಸುವುದು ಆಗಿದೆ. ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಮಾರ್ಗಸೂಚಿಯಂತೆ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷರಾಗಿದ್ದು, ಜಿಲ್ಲಾ ಪಂಚಾಯತ್ ಸಿಇಒ, ತಹಶೀಲ್ದಾರರು, ಚಾವಿಸನಿನಿ ಇಂಜಿನಿಯರ್‌ಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಇತರರು ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

# ಏಕತೆ, ಶಾಂತಿ, ಸಹಾನುಭೂತಿ ಉತ್ತೇಜನಕ್ಕೆ ಸದ್ಭಾವನಾ ದಿನಾಚರಣೆ

• ಪ್ರಜೋದಯ ವರದಿ

**ಆಲೂರು:** ಭಾರತವೊಂದು ಬಹುಧರ್ಮೀಯ ರಾಷ್ಟ್ರವಾದ್ದರಿಂದ ಎಲ್ಲಾ ಧರ್ಮಗಳ ಭಾರತೀಯರ ನಡುವೆ ರಾಷ್ಟ್ರೀಯ ಏಕತೆ, ಶಾಂತಿ, ಸಹಾನುಭೂತಿ ಮತ್ತು ಕೋಮು ಸೌಹಾರ್ದತೆಯನ್ನು ಉತ್ತೇಜಿಸಲು ಸದ್ಭಾವನಾ ದಿನವನ್ನು ಆಚರಿಸಲಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಜಿಲ್ಲಾ ಸಹಾಯಕ ಆಯುಕ್ತ ಎಂ.ಬಾಲಕೃಷ್ಣ ಅಭಿಪ್ರಾಯಪಟ್ಟರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ತಾಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸದ್ಭಾವನಾ ದಿನಾಚರಣೆಯನ್ನು ದೀಪ ಪ್ರಜ್ವಲಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ, ಭಾರತದ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿಯವರ ಜನ್ಮ ದಿನಾಚರಣೆಯನ್ನು ದೇಶಾದ್ಯಂತ ರಾಷ್ಟಿಯ ಸದ್ಭಾವನಾ ದಿನವನ್ನಾಗಿ ಆಚರಿಸಲಾಗುತ್ತದೆ. ಸದ್ಭಾವನ ದಿವಸ್‌ನ ಪ್ರಮುಖ ವಿಷಯವೆಂದರೆ ವಿವಿಧ ನಂಬಿಕೆಗಳು ಮತ್ತು ಸಂಸ್ಕೃತಿಗಳ ಜನರಲ್ಲಿ ರಾಷ್ಟ್ರೀಯ ಏಕತೆ ಮತ್ತು ಸಾಮಾಜಿಕ ಸದ್ಭಾವನೆಯನ್ನು ಪ್ರೋತ್ಸಾಹಿಸುವುದು. ಭಾರತದಲ್ಲಿ ಸದ್ಭಾವನಾ ದಿವಸದಂದು ರಾಜ್ಯಗಳಾದ್ಯಂತ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಸದ್ಭಾವನಾ ದಿವಸ್ ಹಸಿರು, ಪ್ರಕೃತಿಯ ಸೌಂದರ್ಯ, ಪರಿಸರ ಸಂರಕ್ಷಣೆ ಮತ್ತು ಜೀವವೈವಿಧ್ಯ ಸಂರಕ್ಷಣೆಗೆ ಸಂಬಧಿಸಿದೆ. ಸದ್ಭಾವನಾ ದಿವಸ್‌ನ ಅನೇಕ ಕಾರ್ಯಕ್ರಮಗಳ ಮುಖ್ಯ ಗುರಿ ಈ ನಿರ್ಣಾಯಕ ಪರಿಸರ ಸವಾಲುಗಳ ಬಗ್ಗೆ ನಾಗರಿಕರಲ್ಲಿ ಪ್ರಜ್ಞೆಯನ್ನು ಉತ್ತೇಜಿಸುವುದಾಗಿದೆ ಎಂದರು.




ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ ಅವರು ಮಾತನಾಡಿ, ಈ ದಿನದಂದು ಸಸಿಗಳನ್ನು ನೆಡುವುದನ್ನು ಸಹ ಪ್ರಸ್ತಾಪಿಸಲಾಗಿದೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿ, ಭಾರತದೊಳಗೆ ಕೋಮು ಸೌಹಾರ್ದತೆ, ರಾಷ್ಟ್ರೀಯ ಸಮಗ್ರತೆ ಮತ್ತು ಶಾಂತಿಯನ್ನು ಬೆಳೆಸಲು ಶ್ರಮಿಸಿದರು ಮತ್ತು ಪ್ರಪಂಚದ ಉಳಿದ ಭಾಗಗಳಿಗೆ ಸದ್ಭಾವನಾ ರಾಯಭಾರಿ ಎಂದು ಪರಿಗಣಿಸಲ್ಪಟ್ಟರು. ಅವರು ಯುವಕನಾಗಿದ್ದಾಗಿನಿಂದಲೂ ಆಧುನಿಕ ಚಿಂತನೆಯನ್ನು ಹೊಂದಿದ್ದರು ಮತ್ತು ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಉದ್ಯಮಗಳ ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರದ ಪರಿಕಲ್ಪನೆಯನ್ನು ಪ್ರವರ್ತಕರನ್ನಾಗಿ ಮಾಡಿದರು ಎಂದರು.

ತಾಲ್ಲೂಕು ಸಹ ಕಾರ್ಯದರ್ಶಿ ಎಚ್.ಡಿ. ಕುಮಾರ್ ಮಾತನಾಡಿ, ರಾಜೀವ್ ಗಾಂಧಿಯವರು ದೇಶದ ಪ್ರಗತಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದರು. 1986 ರಲ್ಲಿ ಭಾರತದಾದ್ಯಂತ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸುಧಾರಿಸಲು ಮತ್ತು ಹೆಚ್ಚಿಸಲು ಅವರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾರಂಭಿಸಿದರು ಎಂದರು.

ಶಾಲಾ ಮುಖ್ಯ ಶಿಕ್ಷಕ ಹಾಗೂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್, ಹಿರಿಯ ಶಿಕ್ಷಕಿಯರಾದ ವಿ.ರವಿತ, ಎ.ಎಸ್. ರೇಖಾ ಇನ್ನಿತರರು ಹಾಜರಿದ್ದರು.

## ಆಲೂರು ಪಟ್ಟಣ ಪಂಚಾಯಿತಿ ಮಾಸಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರ ಆಗ್ರಹ

# ಕಾಮಗಾರಿ ಪೂರ್ಣಗೊಳಿಸದಿದ್ದರೆ ಗುತ್ತಿಗೆದಾರರು ಕಪ್ಪುಪಟ್ಟಿಗೆ

• ಪ್ರಜೋದಯ ವರದಿ

**ಆಲೂರು:** ನಗರೋತ್ಥಾನ ಯೋಜನೆಯಲ್ಲಿ ನೆನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸದಿದ್ದರೆ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಅಧ್ಯಕ್ಷರು, ಸದಸ್ಯರು ಸಾಮಾನ್ಯ ಸಭೆಯಲ್ಲಿ ಆಗ್ರಹಿಸಿದರು.

ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷೆ ತಾಹೆರ ಬೇಗಂ ಮಾತನಾಡಿ, ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆಯಡಿ 2.08 ಕೋಟಿ ರೂ. ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿತ್ತು. ಕಾಮಗಾರಿ ಪೂರ್ಣಗೊಳಿಸದೆ ಇರುವುದರಿಂದ ಜ.6. 2025 ರಂದು ಜಿಲ್ಲಾ ನಗರಾಭಿವೃದ್ಧಿಕೋಶ ಇಲಾಖೆಗೆ ಪತ್ರ ಬರೆದು ಕೆಲಸ ಪೂರ್ಣಗೊಳಿಸುವಂತೆ ಮನವಿ ಮಾಡಲಾಗಿದೆ. ನಗರಾಭಿವೃದ್ಧಿಕೋಶ ಇಲಾಖೆ ಗುತ್ತಿಗೆದಾರರಿಗೆ ನೋಟಿಸ್ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.




ಪಟ್ಟಣ ಪಂಚಾಯಿತಿಯ 11 ವಾರ್ಡುಗಳ ರಸ್ತೆ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡಗುಂಟೆಗಳನ್ನು ತೆರವುಗೊಳಿಸಿ, ಚರಂಡಿಗಳನ್ನು ಶುಚಿಗೊಳಿಸಲು ಕೂಡಲೆ ಕ್ರಮ ಕೈಗೊಳ್ಳಬೇಕು. ಎಲ್ಲ ವಾರ್ಡುಗಳ ರಸ್ತೆ ಇಕ್ಕೆಲಗಳಲ್ಲಿ ಕೆಲ ನಿವಾಸಿಗಳು ತಮ್ಮ ಮನೆ ಮುಂದೆ ಗಿಡಗಳನ್ನು ಬೆಳೆಸಿ ಸಂಚಾರಕ್ಕೆ ತೊಡಕುಂಟು ಮಾಡಿದ್ದಾರೆ. ತೆರವುಗೊಳಿಸುವ ಮುನ್ನ ಪ್ರಚುರಪಡಿಸಿ ತೆರವುಗೊಳಿಸಬೇಕು ಎಂದು ಎಲ್ಲ ಸದಸ್ಯರು ಆಗ್ರಹಿಸಿದರು.

ಅಧ್ಯಕ್ಷೆ ತಾಹೆರ ಬೇಗಂ ಮತ್ತು ಮುಖ್ಯಾಧಿಕಾರಿ ಮಂಜುನಾಥ್ ಅವರು ಉತ್ತರಿಸಿ, ಜೆಸಿಬಿ ಬಳಸಿ ತೆರವುಗೊಳಿಸಲು ಕೂಡಲೆ ಟೆಂಡರ್ ಕರೆದು ಕ್ರಮ ಕೈಗೊಳ್ಳಲಾಗುವುದು ಎಂದರು.

ಪರಿಶಿಷ್ಟ ಜಾತಿಗೆ ಸೇರಿದ ಒಂದು ಮತ್ತು ಎಂಟನೆ ವಾರ್ಡುಗಳಿಗೆ 15 ನೇ ಹಣಕಾಸು ಯೋಜನೆಯಲ್ಲಿ ಅನುದಾನ ನೀಡಬೇಕು ಎಂದು ಆಗ್ರಹಿಸಿ ಸದಸ್ಯರಾದ ಧರ್ಮ, ಎ.ಡಿ. ಸಂತೋಷ್ ಸಭೆ ಬಹಿಷ್ಕರಿಸಿ ಹೊರ ನಡೆದರು. ಕೆಲ ಸಮಯದ ನಂತರ ಧರ್ಮ ಅವರು ಪುನ: ಸಭೆಗೆ ಹಾಜರಾದರು.

ಮುಖ್ಯಾಧಿಕಾರಿ ಪ್ರತಿಕ್ರಿಯಿಸಿ, ಒಂದನೆ ವಾರ್ಡಿಗೆ ನಗರೋತ್ಥಾನದಲ್ಲಿ 33 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಮತ್ತು ಎಸ್.ಎಫ್.ಸಿ. ಅನುದಾನದಲ್ಲಿ 2.40 ಲಕ್ಷ ರೂ. ವೆಚ್ಚದಲ್ಲಿ ಚರಂಡಿ ಕಾಮಗಾರಿ ಆಗಿದೆ ಎಂದು ಮಾಹಿತಿ ನೀಡಿದರು.

ಬೀದಿನಾಯಿಗಳ ನಿಯಂತ್ರಣಕ್ಕಾಗಿ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಟೆಂಡರ್ ಕರೆಯಲಾಗಿದೆ. ಎಸ್.ಎಫ್.ಸಿ. ಅನುದಾನದಲ್ಲಿ 13 ಬಡ ವಿದ್ಯಾರ್ಥಿಗಳಿಗೆ 31 ಸಾವಿರ ರೂ. ವಿದ್ಯಾರ್ಥಿ ವೇತನ ಮತ್ತು ಪೌರ ಕಾರ್ಮಿಕರ ಇಬ್ಬರು ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

ಮುಖ್ಯರಸ್ತೆ ಮಧ್ಯೆ ಡಿವೈಡರ್‌ಗೆ ಅಲಂಕಾರಿಕ ದೀಪ ಅಳವಡಿಸಲು ಟೆಂಡರ್ ಕರೆಯಲಾಗಿದೆ. ಸರ್ಕಾರದಿಂದ ಬರುವ ಅನುದಾನದಲ್ಲಿ ಎಲ್ಲ ವಾರ್ಡುಗಳಿಗೆ ಆದ್ಯತೆ ಮೇರೆಗೆ ಹಂಚುವ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಅವರು ತಿಳಿಸಿದರು.

## ನಾಳೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಆ.22 ರಂದು 66/11 ಕೆ.ವಿ ಸಾಲಗಾಮೆ, ಹಗರೆ, ಹಳೇಬೀಡು ಮತ್ತು ಗಂಗೂರು ವಿ.ವಿ. ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ಸಾಲಗಾಮೆ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಇಸ್ರೋ, ರಾಯಪುರ, ಕೊಂಡಜ್ಜಿ, ಯಲಗುಂದ, ನಿಟ್ಟೂರು, ಗುಳ್ಳೇನಹಳ್ಳಿ, ಮುತ್ತತಿ, ಭೋಗರಹಳ್ಳಿ, ಕೆಲವತ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳು ಹಾಗೂ ಹಗರೆ, ಹಳೇಬೀಡು ಮತ್ತು ಗಂಗೂರು ವಿ.ವಿ. ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಸುತ್ತಮುತ್ತಲಿನ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ, ಕಾರ್ಯಾಚರಣೆಗಳ ಹಾಸನ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

## ಬೋರ್ಡೋ ಮಿಶ್ರಣ ಸಿದ್ಧಪಡಿಸಲು ಮಾಹಿತಿ



• ಪ್ರಜೋದಯ ವರದಿ

**ಹಾಸನ:** ಕಾರೇಕೆರೆ ಕೃಷಿ ಮಹಾ ವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ತಾಲ್ಲೂಕಿನ ಹಂಪನಹಳ್ಳಿಯಲ್ಲಿ ರೈತರಿಗೆ ಬೋರ್ಡೋ ಮಿಶ್ರಣ ತಯಾರಿಸುವ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿಸಿದರು.

ಕೃಷಿ ಮಹಾವಿದ್ಯಾಲಯದ ಸಸ್ಯ ರೋಗಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಮಂಜುನಾಥ ಅವರು ಮಾತನಾಡಿ, ಬೋರ್ಡೋ ಮಿಶ್ರಣವು ಒಂದು ಶಿಲೀಂಧ್ರ ನಾಶಕವಾಗಿದ್ದು, ಅನೇಕ ತೋಟಗಾರಿಕೆ ಬೆಳೆಗಳಿಗೆ ಬರುವ ರೋಗಗಳನ್ನು ನಿಯಂತ್ರಿಸುವಲ್ಲಿ ಉಪಯುಕ್ತವಾಗಿದೆ. ಈ ಮಿಶ್ರಣವನ್ನು ತಯಾರಿಸಿ ಬೆಳೆಗಳಿಗೆ ಸಿಂಪಡಿಸಲು ಅಥವಾ ಮರಗಳ ಮೇಲೆ ಬಳಿಯಬಹುದು. ಇದನ್ನು ಕಡ್ಡಾಯವಾಗಿ ಪ್ಲಾಸ್ಟಿಕ್ ಅಥವಾ ಮಡಿಕೆಯಲ್ಲಿ ಮಾತ್ರ ತಯಾರಿಸಬೇಕು ಎಂದು ರೈತರಿಗೆ ತಿಳಿಸಿದರು.

**ತಯಾರಿಕಾ ವಿಧಾನ:**

ಮೈಲುತುತ್ತೆ (ಕಾಪರ್ ಸಲ್ಫೇಟ್) 1 ಕೆ.ಜಿ, ಸುಣ್ಣ 1 ಕೆ.ಜಿ, ನೀರು 100 ಲೀಟರ್ ಬೇಕಾಗುತ್ತದೆ. ಮೊದಲು ಒಂದು ಬಕೇಟ್‌ನ 50 ಲೀಟರ್ ನೀರಿನಲ್ಲಿ 1 ಕೆ.ಜಿ. ಮೈಲುತುತ್ತೆ ಕರಗಿಸಬೇಕು. ಮತ್ತೊಂದು ಬಕೇಟ್‌ನ 50 ಲೀಟರ್ ನೀರಿನಲ್ಲಿ 1 ಕೆ.ಜಿ. ಸುಣ್ಣ ಕರಗಿಸಬೇಕು. ನಂತರ ಮೂರನೇ ಬಕೇಟ್‌ನಲ್ಲಿ ಈ ಎರಡೂ ದ್ರಾವಣಗಳನ್ನು ಸೇರಿಸಿ, ಕಡ್ಡಿಯಿಂದ ಚೆನ್ನಾಗಿ ತಿರುಗಿಸಬೇಕು. ಮಿಶ್ರಣದ ಗುಣಮಟ್ಟ ಪರೀಕ್ಷಿಸಲು ಚಾಕುವನ್ನು ಆ ಮಿಶ್ರಣಕ್ಕೆ ಹಚ್ಚಿದಾಗ ಅದು ಕಂದು ಬಣ್ಣಕ್ಕೆ ತಿರುಗಿದರೆ, ಇನ್ನಷ್ಟು ಸುಣ್ಣ ಸೇರಿಸಬೇಕೆಂದು ಮಾಹಿತಿ ನೀಡಿದರು.

## ಅಗ್ನಿ-5 ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ

• ಪ್ರಜೋದಯ ವರದಿ



**ಬಾಲೇಶ್ವರ (ಒಡಿಶಾ):** ಮಧ್ಯಂತರ ಶ್ರೇಣಿಯ ಪರಮಾಣು ಸಿಡಿತಲೆಗಳನ್ನು ಹೊತ್ತಯ್ಯಬಲ್ಲ ದೇಶೀಯವಾಗಿ ತಯಾರಿಸಿದ ಖಂಡಾಂತರ ಕ್ಷಿಪಣಿ ಅಗ್ನಿ-5ರ ಪರೀಕ್ಷಾರ್ಥ ಪ್ರಯೋಗವು ಒಡಿಶಾದ ಚಾಂದೀಪುರದಲ್ಲಿ ಬುಧವಾರ ಯಶಸ್ವಿಯಾಗಿ ನಡೆಯಿತು ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

5,000 ಕಿ.ಮೀ. ವ್ಯಾಪ್ತಿಯ ಶತ್ರು ನೆಲೆಗಳ ಮೇಲೆ ದಾಳಿ ನಡೆಸಬಲ್ಲ ಕ್ಷಿಪಣಿ ಇದಾಗಿದೆ. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನೇತೃತ್ವದಲ್ಲಿ 2012ರ ಏಪ್ರಿಲ್ 19ರಂದು ಅಗ್ನಿ ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಉಡಾವಣೆ ನಡೆದಿತ್ತು. ಎರಡನೇ ಪರೀಕ್ಷಾರ್ಥ ಉಡಾವಣೆಯಲ್ಲೂ ಅಗ್ನಿ-5 ಯಶಸ್ವಿಯಾಗಿತ್ತು.

ಅಗ್ನಿ-5 ಕ್ಷಿಪಣಿ ಒಂದು ಟನ್‌ಗಿಂತಲೂ ಹೆಚ್ಚು ಭಾರದ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಅಲ್ಲದೇ ಇದು ಸ್ವಯಂಚಾಲಿತ ಸೌಲಭ್ಯವನ್ನೂ ಹೊಂದಿದೆ. ವಿವಿಧ ರೇಡಾರ್ ಮತ್ತು ಸಂಪರ್ಕ ವ್ಯವಸ್ಥೆಯ ಮೂಲಕವೂ ಮಾಹಿತಿ ಪಡೆಯುವ ವಿಶೇಷ ಗುಣ ಇದಕ್ಕಿದೆ ಎಂದು ಡಿಆರ್‌ಡಿಒ ಮೂಲಗಳು ಹೇಳಿವೆ.

# ರಾಜ್ಯಕ್ಕೆ ಯೂರಿಯಾ ಪೂರೈಸುವವರಿಗೆ ಬೆಂಬಲ

### ಉಪರಾಷ್ಟ್ರಪತಿ ಚುನಾವಣೆ

• ಪ್ರಜೋದಯ ವರದಿ




**ಹೈದರಾಬಾದ್:** ಉಪ ರಾಷ್ಟ್ರಪತಿ ಚುನಾವಣೆಗೆ ದಿನಗಣನೆ ಆರಂಭವಾಗಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಹಾಗೂ ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟದಲ್ಲಿ ಚುನಾವಣಾ ಚಟುವಟಿಕೆಗಳ ಕಾವು ಏರಿದೆ. ಆದಾಗ್ಯೂ, ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷ ಎರಡೂ ಬಣಗಳಿಂದ ಸಮಾನ ಅಂತರ ಕಾಯ್ದುಕೊಂಡಿದೆ.

ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಯಾವುದೇ ಪಕ್ಷವನ್ನು ಬೆಂಬಲಿಸುವ ಬಗ್ಗೆ ಈವರೆಗೆ ತೀರ್ಮಾನ ಮಾಡಿಲ್ಲ. ಆ ಕುರಿತು ಸಭೆ ಸೇರಿ ಚರ್ಚಿಸುತ್ತೇವೆಂದು ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ (ಕೆಟಿಆರ್) ಬುಧವಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯನ್ನು ವಿರೋಧಿಸುವ ಸುಳಿವನ್ನೂ ನೀಡಿದ್ದಾರೆ. ಎನ್‌ಡಿಎ ಮೈತ್ರಿಕೂಟವು, ತಮಿಳುನಾಡು ಬಿಜೆಪಿ ನಾಯಕ ಮತ್ತು ಮಹಾರಾಷ್ಟ್ರದ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಅಭ್ಯರ್ಥಿ ಯನ್ನಾಗಿ ಘೋಷಿಸಿದೆ. ಇಂಡಿಯಾ ಬಣ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರನ್ನು ಹುರಿಯಾಳನ್ನಾಗಿಸಿದೆ.

ಎನ್‌ಡಿಎ ಆಗಲೀ, ಇಂಡಿಯಾ ಮೈತ್ರಿಕೂಟವಾಗಲೀ ಬಿಆರ್‌ಎಸ್ ಅನ್ನು ಈವರೆಗೆ ಸಂಪರ್ಕಿಸಿಲ್ಲ ಎಂದು ರಾಮ ರಾವ್ ಸ್ಪಷ್ಟಪಡಿಸಿದ್ದಾರೆ. ಯಾರೊಬ್ಬರೂ ನಮ್ಮ ಬೆಂಬಲ ಕೇಳಿಲ್ಲ. ಇನ್ನೂ ಸಮಯ ಇದೆ. ಮತದಾನ ಸೆಪ್ಟೆಂಬರ್ 9ರಂದು ನಡೆಯಲಿದೆ. ಅದಕ್ಕೂ ಮುನ್ನ ನಮ್ಮ ಪಕ್ಷವು ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ.

ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ತೆಲಂಗಾಣವನ್ನು ಕಡೆಗಣಿಸಿವೆ ಎಂದು ಆರೋಪಿಸಿರುವ ಕೆಟಿಆರ್, ರಾಜ್ಯಕ್ಕೆ ಎರಡು ಲಕ್ಷ ಟನ್ ಯೂರಿಯಾ ಸರಬರಾಜು ಮಾಡುವ ಭರವಸೆ ನೀಡುವ ಯಾವುದೇ ಬಣವನ್ನು ಬೆಂಬಲಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

ಲೋಕಸಭೆಯಲ್ಲಿ ಬಿಆರ್‌ಎಸ್‌ನ ಒಬ್ಬ ಸಂಸದನೂ ಇಲ್ಲ. ಆದರೆ, ರಾಜ್ಯಸಭೆಯಲ್ಲಿ ನಾಲ್ವರು ಸದಸ್ಯರಿದ್ದಾರೆ. ಪಕ್ಷದ ನಿರ್ಧಾರವು ರಾಜ್ಯದ ಜನರ ಆಲೋಚನೆ, ನಿರೀಕ್ಷೆಗಳನ್ನು ಅವಲಂಭಿಸಿದೆ ಎಂದು ಹೇಳಿದ್ದಾರೆ.

> **ಕಾಂಗ್ರೆಸ್ ನೀಚ ಪಕ್ಷ**
>
> ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಯಾರನ್ನು ಬೆಂಬಲಿಸುತ್ತಾರೋ ಅವರನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ ಕಾಂಗ್ರೆಸ್ ನೀಚ ಪಕ್ಷ. ಅಂತಹ ಪಕ್ಷದ ಅಭ್ಯರ್ಥಿಯನ್ನು ನಾವು ಬೆಂಬಲಿಸುತ್ತೇವೆಂದು ಹೇಗೆ ಭಾವಿಸುವಿರಿ ಎಂದು ಪ್ರಶ್ನಿಸಿದ್ದಾರೆ.

## ಭೂ ಸುಧಾರಣಾ ಕಾಯ್ದೆಯಿಂದ ಕ್ರಾಂತಿಕಾರಿ ಬದಲಾವಣೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ಸಾಮಾಜಿಕ ನ್ಯಾಯ ಮತ್ತು ಪರಿವರ್ತನೆಯ ಹರಿಕಾರ, ಸಾಧನೆಯ ಸರದಾರ ದಿವಂಗತ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದು ಕ್ರಾಂತಿಕಾರಿ ಬದಲಾವಣೆ ತಂದಿದ್ದಾರೆಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದೇವರಾಜು ಅವರು ಹೇಳಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಡಿ.ದೇವರಾಜ ಅರಸು ಅವರ 110ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಜೀತ ಪದ್ಧತಿ ನಿರ್ಮೂಲನೆ ಸೇರಿ ಋಣಮುಕ್ತ ಕಾಯ್ದೆಯನ್ನು ಜಾರಿಗೆ ತಂದು ರೈತರ ಸಾಲಮನ್ನಾ ಮಾಡಿದರು. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ, ಅದರ ಮೂಲಕ ರಾಜ್ಯದಾದ್ಯಂತ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಜಾರಿಗೊಳಿಸಿದ 20 ಅಂಶಗಳ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ದೇವರಾಜ ಅರಸು ಪ್ರಮುಖ ಪಾತ್ರ ವಹಿಸಿದ್ದಾರೆ. ನೀರಾವರಿ ಕ್ಷೇತ್ರದಲ್ಲಿಯೂ ಅವರು ಅಭೂತಪೂರ್ವ ಸಾಧನೆ ಮಾಡಿದ್ದು, ಅಂದಿನ ವಿರೋಧ ಪಕ್ಷದ ನಾಯಕರ ಮೆಚ್ಚುಗೆಗೂ ಪಾತ್ರರಾಗಿದ್ದರು. ಮುಖ್ಯಮಂತ್ರಿಯಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಲು ಸಾಹುಕಾರ್ ಚನ್ನಯ್ಯ ಹಾಗು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎಸ್.ನಿಜಲಿಂಗಪ್ಪ ಸಹಕಾರ ನೀಡಿದ ಕಾರಣ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಅವರು ವಿಧಾನಸಭೆಗೆ ಆಯ್ಕೆಯಾಗಲು ಸಾಧ್ಯವಾಯಿತು. ಅವರ ಹಾದಿಯಲ್ಲಿ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

1969 ರಿಂದ 1979ರವರೆಗೆ ಜನರ ಬಾಯಲ್ಲಿ ಅರಸು ಯುಗ ಎಂದೇ ಪ್ರಸಿದ್ಧಿ ಪಡೆದ ಅವಧಿ. ಕನ್ನಡ ನಾಡು-ನುಡಿಗೆ ಒತ್ತು ನೀಡಿದ ಅರಸುರವರು 1972ರಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ಮಾಡಲು ಕಾರಣೀಭೂತರಾದರು ಎಂದು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಶೀಲ್ದಾರ್ ವೈ.ಎಂ.ರೇಣುಕಾ ಅವರು, ಅಹಿಂದ ವರ್ಗಗಳಿಗೆ ಅರಸು ಅವರ ಕೊಡುಗೆ ಅಪಾರ. ವಿದ್ಯಾರ್ಥಿಗಳು ಅವರ ಸೇವೆಯನ್ನು ಸದಾ ಸ್ಮರಿಸಿ ತಮ್ಮ ಬದುಕನ್ನು ಮಾದರಿಯಾಗಿ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕ್ರೀಡಾಕೂಟ ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜೊತೆಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮುನಿರಾಜು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ.ಲಕ್ಷ್ಮಣ, ವೃತ್ತ ನಿರೀಕ್ಷಕ ಪ್ರದೀಪ್, ಅಧಿಕಾರಿಗಳಾದ ಸೋಮಶೇಖರ್, ಧನಲಕ್ಷ್ಮಿ, ಪ್ರೇಮ ಉಪಸ್ಥಿತರಿದ್ದರು.

## ಒಳಮೀಸಲಾತಿ : ಅಗತ್ಯವಿದ್ದರೆ ಮಾರ್ಪಾಡು

» ಮೊದಲನೇ ಪುಟದಿಂದ

ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಕುರಿತಂತೆ ಸುಪ್ರೀಂಕೋರ್ಟ್ ರಾಜ್ಯಗಳ ವಿವೇಚನೆಗೆ ಬಿಟ್ಟಿತ್ತು. ಒಳ ಮೀಸಲಾತಿ ವರ್ಗೀಕರಣ ರಾಜ್ಯ ಸರ್ಕಾರಗಳಿಗೆ ಸಾಂವಿಧಾನಿಕವಾಗಿ ಬಂದ ಅಧಿಕಾರ ಎಂಬುದನ್ನು ಹೇಳಿದೆ. ನ್ಯಾ. ನಾಗಮೋಹನ್ ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ರಚನೆ ಮಾಡಲಾಯಿತು. ನಾಗಮೋಹನ್ ದಾಸ್ ಆಯೋಗ 101 ಪರಿಶಿಷ್ಟ ಜಾತಿಗಳನ್ನು ಅಧ್ಯಯನ ಮಾಡಿ ವರದಿ ನೀಡಿದೆ. ಆದರೆ, ಕೆಲವು ಮಾರ್ಪಾಡು ಮಾಡಿ ವರದಿಯನ್ನು ಅಂಗೀಕರಿಸಿದ್ದೇವೆ. ಸಮಾನತೆ ನ್ಯಾಯ ಸಮ್ಮತೆ ಖಚಿತಪಡಿಸಿಕೊಳ್ಳಲು ಮಾರ್ಪಾಡು ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

## ರೈಲ್ವೆಯಲ್ಲಿ ನೇಮಕಾತಿ : ಕನ್ನಡದಲ್ಲಿ ಪರೀಕ್ಷೆ

**ನವದೆಹಲಿ:** ರೈಲ್ವೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಕನ್ನಡ ಸೇರಿ 15 ಭಾಷೆಗಳಲ್ಲಿ ನಡೆಸಲಾಗುತ್ತದೆಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

# ತಂಬಾಕು ಉತ್ಪನ್ನ ಮಾರಾಟ : ದಾಳಿ

• ಪ್ರಜೋದಯ ವರದಿ



**ಅರಕಲಗೂಡು:** ಜಿಲ್ಲಾ ತಂಬಾಕು ಕೋಶ ಮತ್ತು ತಾಲ್ಲೂಕು ತಂಬಾಕು ಕೋಶದ ವತಿಯಿಂದ ಬುಧವಾರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಅವರ ನೇತೃತ್ವದಲ್ಲಿ ಶಾಲಾ-ಕಾಲೇಜು ಬಳಿ ಇರುವ ಅಂಗಡಿಗಳ ಮೇಲೆ ದಾಳಿ ಮಾಡಿ 2890 ರೂ. ದಂಡ ವಿಧಿಸಿದಲ್ಲದೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವ ಪರಿಣಾಮ ಯುವ ಸಮುದಾಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ ತಿಳುವಳಿಕೆ ನೀಡಲಾಯಿತು.

ಪಟ್ಟಣದ ಬಾಲಕರ ಪದವಿ ಪೂರ್ವ ಕಾಲೇಜು ರಸ್ತೆ, ಕೋರ್ಟ್ ಮುಂಭಾಗ, ಹಾಸನ ರಸ್ತೆ ಸರ್ಕಾರಿ ಐಟಿಐ ಕಾಲೇಜು ಮುಂಭಾಗದ ಅಂಗಡಿಗಳ ಮೇಲೆ ತಂಡ ದಿಢೀರ್ ದಾಳಿ ಮಾಡಿ ಜಾಗೃತಿ ಮೂಡಿಸಿತು.

ಈ ಸಂದರ್ಭದಲ್ಲಿ ಡಾ.ಪುಷ್ಪಲತಾ ಅವರು ಮಾತನಾಡಿ, ಸೆಕ್ಷನ್4ರ ಅಡಿಯಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿಗಳ ಮೇಲೆ ದಂಡ ವಿಧಿಸಬಹುದಾಗಿದೆ. ಕೇವಲ ದಂಡ ವಿಧಿಸುವುದರಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಶಾಲಾ-ಕಾಲೇಜು ಬಳಿ ಇರುವ ಅಂಗಡಿಗಳಲ್ಲಿ ತಂಬಾಕು ಉತ್ಪನ್ನ ಗಳನ್ನು ಮಾರಾಟ ಮಾಡಬಾರದು. ಅದರಿಂದ ಅಪ್ರಾಪ್ತ ಬಾಲಕರು ಈ ದುಷ್ಕೃತ್ಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಅದರ ನಿಯಂತ್ರಣಕ್ಕೆ ಪ್ರಮುಖವಾಗಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಸಾಧ್ಯವಾಗುತ್ತದೆ. ಪ್ರತಿ ಮನೆಗಳಲ್ಲಿ ಬಾಲಕರು ಇದ್ದು, ಅವರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂದು ತಿಳುವಳಿಕೆ ನೀಡಿದರಲ್ಲದೆ ಮುಂದಿನ ದಿನಗಳಲ್ಲಿ ಅಂಗಡಿಗಳ ಮೇಲೆ ದಾಳಿ ಮುಂದುವರಿಸಲಾಗುವುದೆಂದು ಹೇಳಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳಾ, ಜಿಲ್ಲಾ ತಂಬಾಕು ಕೋಶದ ಸಂಯೋಜಕಿ ಮಮತಾ, ಆರೋಗ್ಯ ಇಲಾಖೆ ಅಧಿಕಾರಿ ಪರಮೇಶ್, ಪೊಲೀಸ್ ಕುಮಾರ್ ದಾಳಿಯಲ್ಲಿ ಭಾಗವಹಿಸಿದ್ದರು.

# ಮಹನೀಯರ ಆದರ್ಶಗಳ ಅನುಕರಣೆ ಅಗತ್ಯ

• ಪ್ರಜೋದಯ ವರದಿ



**ಅರಕಲಗೂಡು:** ಡಿ.ದೇವರಾಜ ಅರಸು ಅವರು ಅನುಷ್ಠಾನಕ್ಕೆ ತಂದಿರುವ ಯೋಜನೆಗಳಿಂದ ಲಕ್ಷಾಂತರ ಬಡ ಜನರು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದು ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ತಿಳಿಸಿದರು.

ಪಟ್ಟಣದ ಅರಸು ಭವನದಲ್ಲಿ ತಾಲ್ಲೂಕು ಆಡಳಿತ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆದ ದೇವರಾಜ ಅರಸು ಅವರ 110 ಜನ್ಮ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಎಲ್ಲಾ ಹಿಂದುಳಿದ ವರ್ಗಗಳ ಮಕ್ಕಳಿಗೆ ಸರ್ಕಾರಿ ಸವಲತ್ತುಗಳು ದೊರೆಯುತ್ತಿವೆ. ಬಡವರು ಭೂಮಿ ಹೊಂದಲು ಸಾಧ್ಯವಾಗಿದೆ. ಆದಕ್ಕೆ ಪ್ರಮುಖ ಕಾರಣ ದೇವರಾಜ ಅರಸು ಅವರು ದೂರದೃಷ್ಟಿಯಿಂದ ಜಾರಿಗೆ ತಂದ ಕಾರ್ಯಕ್ರಮಗಳಾಗಿವೆ. ಮಹನೀಯರ ಜಯಂತಿಗಳಲ್ಲಿ ಭಾಗವಹಿಸುವ ಜೊತೆಗೆ ಅವರ ಆದರ್ಶಗಳನ್ನು ನಿತ್ಯವೂ ಅನುಕರಣೆ ಮಾಡಬೇಕಿದೆ. ಇಂದಿನ ಯುವ ಸಮುದಾಯದ ಮೇಲೆ ಮಹತ್ತರವಾದ ಸಮಾಜಮುಖಿ ಕರ್ತವ್ಯಗಳು ಇದ್ದು, ಅವುಗಳನ್ನು ಪಾಲನೆ ಮಾಡಬೇಕಿದೆ ಎಂದು ಹೇಳಿದರು.

ಸಹ ಶಿಕ್ಷಕ ಬಸವರಾಜು ಅವರು ಮಾತನಾಡಿ, ಅರಸು ಅವರ ರಾಜಕೀಯ ನಡೆ ಮತ್ತು ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ನೀಡಿರುವ ಜನಪರ ಕಾರ್ಯಕ್ರಮಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಅವರ ಆಳ್ವಿಕೆಯಲ್ಲಿ ಜಾರಿಗೆ ತಂದ ಉಳುವವನೆ ಭೂಮಿಯ ಒಡೆತನದ ಹಕ್ಕಿನಿಂದ ಇಂದು ಲಕ್ಷಾಂತರ ಕುಟುಂಬಗಳು ಸ್ವಂತ ಭೂಮಿಯನ್ನು ಹೊಂದಿ ಬದುಕು ಕಟ್ಟಿಕೊಳ್ಳು ವಂತಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮ ಕೂಡ ಅವರಿಂದಲೇ ಅನುಷ್ಠಾನಕ್ಕೆ ಬಂದಿದೆ. ಅವರ ರಾಜಕೀಯ ದೃಷ್ಟಿಕೋನ ಇಂದಿನ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಹಿಂದುಳಿದ ವರ್ಗಗಳ ಸಂಘದ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರದೀಪ್ ಕುಮಾರ್, ಅಧಿಕಾರಿ ಗಳಾದ ಡಾ. ಪುಷ್ಪಲತಾ, ಸ್ವಾಮಿ, ರವಿ ಕುಮಾರ್, ಎಸ್.ಬಿ.ಉಳ್ಳಾಗಡ್ಡಿ, ನಾಗೇಂದ್ರ ಕುಮಾರ್, ಪ್ರಕಾಶ್, ವೆಂಕಟೇಶ್, ಸೋಮ ಶೇಖರ್, ಅಜಿತ್ ಕುಮಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು ಇತರರು ಉಪಸ್ಥಿತರಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ

• ಪ್ರಜೋದಯ ವರದಿ



**ಬೇಲೂರು:** ರೈತರ ಹಿತಾಸಕ್ತಿಗಾಗಿ ಆಧುನಿಕ ಕೃಷಿ ಪದ್ಧತಿ ಕಾರ್ಯಕ್ರಮವನ್ನು ಪಟ್ಟಣ ಸಮೀಪದ ರಾಯಪುರ ಗ್ರಾಮದಲ್ಲಿ ಬುಧವಾರ ಲಯನ್ಸ್ ಸಂಸ್ಥೆ ವತಿಯಿಂದ ಆಯೋಜಿಸಿ ರೈತರಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ರೈತರಿಗೆ ಕೃಷಿಯಲ್ಲಿ ಅಳವಡಿಸಿಕೊಳ್ಳಬಹುದಾದ ನೂತನ ತಂತ್ರಜ್ಞಾನ, ಆಧುನಿಕ ಯಂತ್ರೋಪಕರಣಗಳ ಬಳಕೆ ಹಾಗು ವೈಜ್ಞಾನಿಕ ವಿಧಾನಗಳ ಮೂಲಕ ಹೆಚ್ಚಿನ ಇಳುವರಿ, ಲಾಭ ಪಡೆಯುವ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು. ವಿಶೇಷವಾಗಿ, ಗದ್ದೆಗಳಲ್ಲಿ ಸೂಕ್ತ ಬಿತ್ತನೆ ವಿಧಾನದೊಂದಿಗೆ ನೀರಾವರಿ ತಂತ್ರಜ್ಞಾನ, ಸಮರ್ಪಕ ಗೊಬ್ಬರ ಬಳಕೆ, ರೋಗ, ಕೀಟ ನಿಯಂತ್ರಣ ಮಾರ್ಗಗಳು ಭೂಮಿಯ ಫಲವತ್ತತೆ ಜೊತೆಗೆ ಯಾವ ಮಾದರಿ ಬೆಳೆ ಬೆಳೆಯಬೇಕು ಎಂಬುದನ್ನು ತಿಳಿಸಿಕೊಡಲಾಯಿತು.

ರೈತರು ಹೆಚ್ಚಿನ ಮಾಹಿತಿ ಪಡೆಯಲು ಕೃಷಿ ಇಲಾಖೆಯಲ್ಲಿನ ಮಾಹಿತಿ ತಜ್ಞರು ಹಂಚಿಕೊಂಡರು. ಲಯನ್ಸ್ ಸಂಸ್ಥೆ ಸದಸ್ಯರು ರೈತರೊಂದಿಗೆ ಗದ್ದೆಗಿಳಿದು ಭತ್ತದ ಸಸಿನಾಟಿ ಮಾಡಿದರು.

ಲಯನ್ಸ್ ಸಂಸ್ಥೆ ಅಧ್ಯಕ್ಷೆ ತಾರಾಮಣಿ ಅವರು ಮಾತನಾಡಿ, ರೈತರು ದೇಶದ ಬೆನ್ನೆಲುಬು. ಅವರ ಶ್ರಮವೇ ಸಮಾಜಕ್ಕೆ ಆಧಾರ. ರೈತರ ಜೀವನ ಸುಧಾರಿಸಲು ಮತ್ತು ಅವರನ್ನು ಆರ್ಥಿಕ ವಾಗಿ ಬಲಪಡಿಸಲು ನಾವು ಸದಾ ಬದ್ಧರಾಗಿದ್ದೇವೆ. ಈ ಹಿನ್ನಲೆ ರಾಯಪುರ ಗ್ರಾಮದ ರೈತರಿಗೆ ಉಚಿತವಾಗಿ ಗೊಬ್ಬರ ನೀಡುವ ಭರವಸೆ ನೀಡುತ್ತೇವೆ ಎಂದರು.

ರಾಯಾಪುರ ಗ್ರಾಮದ ರೈತ ಗಿರೀಶ್ ಮಾತನಾಡಿ, ಲಯನ್ಸ್ ಸಂಸ್ಥೆ ಉತ್ತಮ ಕಾರ್ಯದಿಂದ ನಾವು ಆಧುನಿಕ ಕೃಷಿ ಪದ್ಧತಿ ಬಗ್ಗೆ ತಿಳಿಯುವಂತಾಗಿದೆ. ಗದ್ದೆಗಳಲ್ಲಿ ರೈತರಿಗೆ ಪ್ರಾಯೋಗಿಕ ತರಬೇತಿ ನೀಡಿರುವುದು ನಮಗೆ ಉಪಯುಕ್ತವಾಗಿದೆ. ಕೃಷಿ ಸಲಕರಣೆ, ಗೊಬ್ಬರಗಳನ್ನು ನಮಗೆ ನೀಡಿರುವುದು ಸಂತಸ ಎಂದರು. ಲಯನ್ಸ್ ಸಂಸ್ಥೆ ಮಾಜಿ ಅಧ್ಯಕ್ಷ ಡಾ.ಚಂದ್ರಮೌಳಿ, ಪೂವಯ್ಯ, ಸುರೇಶ್, ಕಾರ್ಯದರ್ಶಿ ಆದರ್ಶ ಪ್ರಶಾಂತ್, ರೈತರು ಇದ್ದರು.

## ತಹಶೀಲ್ದಾರ್ ಅಮಾನತಿಗಾಗಿ ವಿಧಾನಸೌಧ ಮುಂಭಾಗ ಧರಣಿ

• ಪ್ರಜೋದಯ ವರದಿ




**ಹಾಸನ:** ಬೇಲೂರು ತಾಲ್ಲೂಕು ಕಚೇರಿ ಮುಂಭಾಗ ಸಾಲುಮರದ ತಿಮ್ಮಕ್ಕ ಅವರು ನೆಟ್ಟು ಬೆಳೆಸಿದ್ದ ಮರಗಳನ್ನು ತೆರವುಗೊಳಿಸಿರುವ ತಹಶೀಲ್ದಾರ್ ಅವರನ್ನು ಅಮಾನತು ಮಾಡ ಬೇಕೆಂದು ಒತ್ತಾಯಿಸಿ ವಿಧಾನಸೌಧ ಮುಂಭಾಗವಿರುವ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸ ಲಾಗುವುದೆಂದು ಮಲೆನಾಡು ರಕ್ಷಣಾ ಸೇನೆ ಜಿಲ್ಲಾಧ್ಯಕ್ಷ ಬಿ.ಎಸ್.ದರ್ಶನ್ ಅವರು ತಿಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದ್ಮಶ್ರೀ ಪುರಸ್ಕೃತರು ಹಾಗು ಪರಿಸರ ರಾಯಭಾರಿಯಾಗಿರುವ ಸಾಲುಮರದ ತಿಮ್ಮಕ್ಕ ಅವರು ತಾಲ್ಲೂಕು ಕಚೇರಿ ಮುಂಭಾಗ ಜನರಿಗೆ ನೆರಳು ಹಾಗು ಪ್ರಾಣಿ-ಪಕ್ಷಿಗಳಿಗೆ ಹಣ್ಣು ದೊರೆಯುವ ಉದ್ದೇಶದಿಂದ ಗಿಡಗಳನ್ನು ಪೋಷಿಸುತ್ತಿದ್ದರು. ಕೆಲ ದಿನಗಳ ಹಿಂದೆ ತಹಶೀಲ್ದಾರ್ ಗಿಡಗಳನ್ನು ಏಕಾಏಕಿ ತೆರವು ಗೊಳಿಸಿದ್ದಾರೆ. ಹೀಗಾಗಿ ತಹಶೀಲ್ದಾರ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ತಹಶೀಲ್ದಾರ್, ನನ್ನ ಇಷ್ಟ, ನಾನು ಯಾರ ಅಪ್ಪಣೆ ತೆಗೆದುಕೊಳ್ಳಬೇಕಾಗಿಲ್ಲ ಎಂದು ಉಡಾಫೆಯಿಂದ ವರ್ತಿಸಿದ್ದಾರೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಅಮಾನತುಗೊಳಿಸಬೇಕು ಹಾಗು ತೆರವುಗೊಳಿಸಿರುವ ಗಿಡಗಳನ್ನು ಪುನಃ ನಡೆದಬೇಕು. ಇಲ್ಲದಿದ್ದರೆ ಆ.25ರ ನಂತರ ಸಾಲು ಮರದ ತಿಮ್ಮಕ್ಕ ಅವರ ನೇತೃತ್ವದಲ್ಲಿ ವಿಧಾನ ಸೌಧದ ಮುಂಭಾಗವಿರುವ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಲಾಗುವುದೆಂದು ಎಚ್ಚರಿಸಿದರು.

ಪರಿಸರ ಸೇವೆ ಮಾಡುತ್ತಾ ನೂರಾರು ಪ್ರಶಸ್ತಿಗಳನ್ನು ಪಡೆದುಕೊಂಡಿರುವ ನಾಡೋಜ ಸಾಲುಮರದ ತಿಮ್ಮಕ್ಕ ಅವರಿಂದ ಈ ಬಾರಿಯ ಮೈಸೂರು ದಸರಾ ಉದ್ಘಾಟನೆ ನೆರವೇರಿಸಲು ಸರ್ಕಾರ ಕ್ರಮ ಕೈಗೊಳ್ಳ ಬೇಕೆಂದು ಈ ವೇಳೆ ಒತ್ತಾಯಿಸಿದರು. ಮಲೆನಾಡು ರಕ್ಷಣಾ ಸೇನೆ ಉಪಾಧ್ಯಕ್ಷ ನಾಗೇಂದ್ರ ಪಟೇಲ್, ಸಂಚಾಲಕ ಯುವ ರಾಜ್, ಸಹ ಸಂಚಾಲಕರಾದ ರಾಜೇಶ್‌ಗೌಡ, ಆನಂದ್, ಸತೀಶ್, ಪರಿಕ್ಷಿತ್ ಇದ್ದರು.

## ಯೋಧರ ಬದುಕು ಸಾರ್ಥಕತೆ, ನಿಸ್ವಾರ್ಥ ಸೇವೆಯಿಂದ ಕೂಡಿವೆ

• ಪ್ರಜೋದಯ ವರದಿ



**ಹಾಸನ:** ಯೋಧರ ಬದುಕು ಸಾರ್ಥಕತೆ ಹಾಗೂ ನಿಸ್ವಾರ್ಥ ಸೇವೆಯಿಂದ ಕೂಡಿರುತ್ತದೆ ಎಂದು ನಿವೃತ್ತ ಕಮಾಂಡರ್ ಎಂ.ಎಸ್.ಚಂದ್ರಶೇಖರ್ ಅವರು ಹೇಳಿದರು.

ನಗರದ ಸಂಸ್ಕೃತ ಭವನದಲ್ಲಿ ಸಂಸ್ಕೃತ ಸಂಘದಿಂದ ಆಯೋಜಿಸಿದ್ದ ಸಿಂಧೂರ ರಕ್ಷಕ ರಕ್ಷಣಾಪಡೆ ವಿಶೇಷ ಮಾಹಿತಿ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ ಹಿಂದಿನಿಂದಲೂ ವ್ಯಾಪಾರಕ್ಕಾಗಿ ಬಂದಂತಹ ಬೇರೆ ದೇಶದ ವ್ಯಕ್ತಿಗಳಿಂದ ಆಳಲ್ಪಟ್ಟಿದ್ದು ಅನೇಕ ಹೋರಾಟಗಳನ್ನು ಮಾಡುತ್ತಾ ಬಂದಿದೆ. ಅದರಲ್ಲಿ ವಿಜಯವನ್ನು ಸಾಧಿಸಿರುವುದು ಇದಕ್ಕೆಲ್ಲಾ ಭಾರತೀಯರಲ್ಲಿರುವ ಒಗ್ಗಟ್ಟು ಕಾರಣ. ನಮ್ಮ ರಾಷ್ಟ್ರ ಅತ್ಯುನ್ನತ ಸ್ಥಾನದಲ್ಲಿದೆ ಎಂದರೆ ಅದಕ್ಕೆ ನಮ್ಮ ಸದೃಢ ಸೇನೆಯೆ ಕಾರಣವಾಗಿದೆ ಎಂದರು.

ಯಾವುದೇ ಒಂದು ದೇಶ ಯುದ್ಧ ಮಾಡಬೇಕಾದರೆ ಅಕ್ಕಪಕ್ಕದ ರಾಷ್ಟ್ರಗಳೇ ಶತ್ರುಗಳು. ಈ ಯುದ್ಧಗಳು ನಡೆಯಬಾರದಂತೆ ಸೈನ್ಯವು ಆದಷ್ಟೂ ತಡೆಯಲು ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತದೆ. ಯುದ್ಧಗಳು ಪ್ರಾರಂಭದಲ್ಲೇ ನಡೆಯುವುದಿಲ್ಲ. ಮೊದಲು ಸಂಧಾನ ಸೂತ್ರಗಳು ನಡೆಯುತ್ತವೆ. ಏನೇ ಆದರೂ ಸಂಧಾನ ಸೂತ್ರಗಳು ಯಶಸ್ವಿಯಾಗದಿದ್ದಾಗ ಕೊನೆಯಲ್ಲಿ ಮಾತ್ರ ಯುದ್ಧ ನಡೆಯಲು ಸೈನ್ಯ ಪ್ರವೇಶವಾಗುತ್ತದೆ ಎಂದರು.

ಕೆಲವೊಂದು ಬಲಿಷ್ಠ ದೇಶಗಳು ಕನಿಷ್ಠ ದೇಶಗಳಿಗೆ ಸೌಕರ್ಯಗಳನ್ನು ಪೂರೈಕೆ ಮಾಡಿ ಆ ದೇಶಗಳನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಕೊನೆಗೆ ಆ ದೇಶವನ್ನೇ ಹಾಳು ಮಾಡು ತ್ತವೆ. ಏನೇ ಆಗಲಿ ಒಂದು ದೇಶದ ಪರಿಸ್ಥಿತಿ ಸುವ್ಯವಸ್ಥಿತವಾದ ಮತ್ತು ಉತ್ತಮ ರೀತಿಯಲ್ಲಿ ನಡೆದುಕೊಂಡು ಹೋಗಬೇಕಾದರೆ ಆ ದೇಶದ ಸೈನಿಕರ ಮೇಲೆಯೇ ನಿಂತಿರುತ್ತದೆಂದರು.

ವಿಜಯ ಶಾಲೆಯ ವಿದ್ಯಾರ್ಥಿನಿ ಡಿ.ಧನ್ವಿತಾ, ಎಸ್.ಆರ್.ಎಸ್.ಪ್ರಜ್ಞಾ ವಿದ್ಯಾ ಶಾಲೆಯ ಡಿ.ತನ್ವಿಕಾ, ಶ್ರೀ ರಾಮಕೃಷ್ಣವಿದ್ಯಾಲಯದ ಕೃತಿಕಾ ಹಾಗೂ ಎಲೈಟ್ ಶಾಲೆಯ ಎಂ.ಎಂ.ಪ್ರಹರಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ನೀಡಿದರು. ಮಂಜುನಾಥ್ ಗಾಂವ್ಕರ ವಂದಿಸಿ ದರು. ಕು.ಅನ್ವಿತಾ ನಿರೂಪಿಸಿದರು.

## ಕ್ಲಬ್ ಚೆಸ್ ಪ್ರದರ್ಶನ ಪಂದ್ಯ ವಿಶ್ವನಾಥನ್ ಆನಂದ್-ಕ್ಯಾಸ್ಪರೋವ್

• ಪ್ರಜೋದಯ ವರದಿ



**ನವದೆಹಲಿ:** ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ರಷ್ಯಾದ ದಂತಕಥೆ ಗ್ಯಾರಿ ಕ್ಯಾಸ್ಪರೋವ್ ಜೊತೆ ದೀರ್ಘ ಕಾಲದ ನಂತರ ಮುಖಾಮುಖಿಯಾಗಲಿದ್ದಾರೆ. ಹಾಲಿ ವಿಶ್ವ ಚಾಂಪಿಯನ್ ಗುಕೇಶ್, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಎದುರಾಳಿಯಾಗಲಿದ್ದಾರೆ.

ಅಕ್ಟೋಬರ್‌ನಲ್ಲಿ ಅಮೇರಿಕಾದ ಸೇಂಟ್ ಲೂಯಿಯಲ್ಲಿ ನಡೆಯಲಿರುವ ಕ್ಲಬ್ ಚೆಸ್ (ಲೆಜೆಂಡ್ಸ್) ಪ್ರದರ್ಶನ ಪಂದ್ಯಗಳು ಈ ಮುಖಾಮುಖಿಗಳಿಗೆ ವೇದಿಕೆಯಾಗಿದೆ.

ಕ್ಯಾಸ್ಪರೋವ್ ಮತ್ತು ಆನಂದ್ 2021ರಲ್ಲಿ ಕೊನೆಯ ಬಾರಿ ಜಾಗ್ರೆಬ್‌ನ ಕ್ರೊವೇಷ್ಯಾ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಎದುರಾಳಿಗಳಾಗಿದ್ದರು. ಆಗ ಆನಂದ್ ಜಯಶಾಲಿಯಾಗಿದ್ದರು. ಅವರಿಬ್ಬರು ವಿವಿಧ ಮಾದರಿಯಲ್ಲಿ 82 ಸಲ ಮುಖಾಮುಖಿ ಆಗಿದ್ದಾರೆ. 30 ಪಂದ್ಯಗಳು ಡ್ರಾ ಆಗಿದ್ದು, ಉಳಿದವುಗಳಲ್ಲಿ ಕ್ಯಾಸ್ಪರೋವ್ ಹೆಚ್ಚಿನ ಸಲ ಜಯಗಳಿಸಿದ್ದಾರೆ.

ಅಕ್ಟೋಬರ್ 7 ರಿಂದ 11 ರವರೆಗೆ ಪ್ರದರ್ಶನ ಪಂದ್ಯಗಳು ರ್‍ಯಾಪಿಡ್ ಮತ್ತು ಬ್ಲಿಟ್ಜ್ ಮಾದರಿಗಳಲ್ಲಿ ನಡೆಯಲಿವೆ. 1.25 ಕೋಟಿ ಬಹುಮಾನ ನಿಧಿಯೂ ಇದೆ ಎಂದು ಸೇಂಟ್ ಲೂಯಿ ಚೆಸ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ. ಸೇಂಟ್ ಲೂಯಿ ನಗರ ಅಮೇರಿಕಾದ ಚೆಸ್ ರಾಜಧಾನಿಯಾಗಿ ಬೆಳೆದಿದೆ.

ಮಾಜಿ ಚಾಂಪಿಯನ್ನರ ಹಣಾಹಣಿಯ ಬಳಿಕ ಇದೇ ಸ್ಥಳದಲ್ಲಿ, ಅ.27 ರಿಂದ 29ರವರೆಗೆ ಹಾಲಿ ಆಟಗಾರರು ಎದುರಾಗಲಿದ್ದಾರೆ. ಅತಿ ಹೆಚ್ಚಿನ ರೇಟಿಂಗ್ ಹೊಂದಿರುವ ಟೂರ್ನಿಯಲ್ಲಿ ಅಗ್ರ ಕ್ರಮಾಂಕದ ಆಟಗಾರ ಕಾರ್ಲ್‌ಸನ್, ಹಿಕಾರು ನಕಾಮುರಾ, ಫ್ಯಾಬಿಯಾನೊ ಕರುವಾಣ ಮತ್ತು ಗುಕೇಶ್ ಆಡಲಿದ್ದಾರೆ. ಈ ಟೂರ್ನಿ 3.58 ಕೋಟಿ ಬಹುಮಾನ ಹಣ ಹೊಂದಿದೆ.

### ಆ.29ರಿಂದ ಸೆ.7ರವರೆಗೆ ಟೂರ್ನಿ | 18 ಆಟಗಾರರ ಆಯ್ಕೆ

# ಏಷ್ಯಾ ಕಪ್ ಹಾಕಿ: ಭಾರತ ತಂಡ ಪ್ರಕಟ

• ಪ್ರಜೋದಯ ವರದಿ



**ನವದೆಹಲಿ:** ತಿಂಗಳ ಕೊನೆಯಲ್ಲಿ ಬಿಹಾರದ ರಾಜಗೀರ್‌ನಲ್ಲಿ ಆರಂಭವಾಗುವ ಏಷ್ಯಾ ಕಪ್ ಹಾಕಿ ಟೂರ್ನಿಗೆ 18 ಆಟಗಾರರ ಭಾರತ ಪುರುಷರ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ತಂಡದಲ್ಲಿ ಅಚ್ಚರಿಯ ಬದಲಾವಣೆಗಳೇನೂ ಆಗಿಲ್ಲ. ಮಿಡ್‌ಫೀಲ್ಡರ್ ರಾಜಿಂದರ್ ಸಿಂಗ್, ಮುನ್ಪಡೆ ಆಟಗಾರರಾದ ಶಿಲಾನಂದ ಲಾಕ್ರಾ ಮತ್ತು ದಿಲ್‌ಪ್ರೀತ್‌ಸಿಂಗ್ ಸ್ಥಾನ ಉಳಿಸಿಕೊಂಡಿದ್ದಾರೆ.

ಟೂರ್ನಿಯು ಬಿಹಾರದಲ್ಲಿ ಆಗಸ್ಟ್ 29 ರಿಂದ ಸೆಪ್ಟೆಂಬರ್ 7ರವರೆಗೆ ನಡೆಯಲಿದೆ. ಏಷ್ಯಾ ಕಪ್ ವಿಜೇತ ತಂಡವು ಮುಂದಿನ ವರ್ಷದ ಆಗಸ್ಟ್‌ನಲ್ಲಿ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಎಫ್‌ಐಎಚ್ ಪುರುಷರ ವಿಶ್ವ ಕಪ್ ಹಾಕಿ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯಲಿದೆ. ಅನುಭವಿ ಡ್ರ್ಯಾಗ್ ಫ್ಲಿಕ್ಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ತಂಡದ ನಾಯಕರಾಗಿ ಮುಂದುವರಿದಿದ್ದಾರೆ.

ರಾಜಿಂದರ್, ಲಾಕ್ರಾ ಮತ್ತು ದಿಲ್‌ಪ್ರೀತ್ ಅವರು ಇತ್ತೀಚೆಗೆ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡ ತಂಡದಲ್ಲಿದ್ದರು. ರಾಜಿಂದರ್ ಅವರು ಶಂಶೇರ್ ಸಿಂಗ್ ಬದಲು, ಲಾಕ್ರಾ ಅವರು ಇತ್ತೀಚೆಗೆ ನಿವೃತ್ತರಾದ ಲಲಿತ್ ಉಪಾಧ್ಯಾಯ ಬದಲು, ದಿಲ್‌ಪ್ರೀತ್ ಅವರು ಗುರ್ಜಂತ್ ಸಿಂಗ್ ಸ್ಥಾನದಲ್ಲಿ ಅವಕಾಶ ಪಡೆದಿದ್ದಾರೆ. ಪ್ರೊ. ಲೀಗ್‌ನ ಯುರೋಪಿಯನ್ ಲೆಗ್ ನಂತರ ಜೂನ್‌ನಲ್ಲಿ ಉಪಾಧ್ಯಾಯ ಅವರು ಅಂತರರಾಷ್ಟ್ರೀಯ ಹಾಕಿಯಿಂದ ನಿವೃತ್ತರಾಗಿದ್ದರು.

ಆತಿಥೇಯ ಭಾರತವು, ಜಪಾನ್, ಚೀನಾ ಮತ್ತು ಕಜಾಕಸ್ತಾನ ತಂಡಗಳ ಜೊತೆ ಎ ಗುಂಪಿ ನಲ್ಲಿದೆ. ಆ.29ರಂದು ಚೀನಾವನ್ನು ಎದುರಿಸುವ ಮೂಲಕ ಭಾರತ ಅಭಿಯಾನ ಆರಂಭಿಸ ಲಿದೆ. ಅತಿ ಒತ್ತಡದ ಸನ್ನಿವೇಶದಲ್ಲಿ ಹೇಗೆ ಆಡಬೇಕೆಂದು ಅರ್ಥ ಮಾಡಿಕೊಳ್ಳಬಲ್ಲ ಅನುಭವಿ ತಂಡಕ್ಕೆ ಒತ್ತು ನೀಡಿದ್ದೇವೆಂದು ತಂಡದ ಆಯ್ಕೆಗೆ ಸಂಬಂಧಿಸಿ ಮುಖ್ಯ ಕೋಚ್ ಕ್ರೆಗ್ ಫುಲ್ಟನ್ ತಿಳಿಸಿದರು.

ವಿಶ್ವಕಪ್‌ಗೆ ಅರ್ಹತೆ ಪಡೆಯುವ ದೃಷ್ಟಿಯಿಂದ ನಮಗೆ ಏಷ್ಯಾ ಕಪ್ ಮಹತ್ವದ್ದು. ಹೀಗಾಗಿ ಶಾಂತಚಿತ್ತದ, ಪರಿಸ್ಥಿತಿಗೆ ಹೊಂದಿಕೊಳ್ಳುವ ಮತ್ತು ನಿರ್ಣಾಯಕ ಸ್ಥಿತಿಯಲ್ಲಿ ಹೇಗೆ ಆಡ ಬೇಕೆಂದು ಬಲ್ಲ ಆಟಗಾರರ ಆಯ್ಕೆ ಮಾಡಿದ್ದೇವೆ ಎಂದರು.

**ತಂಡ: ಗೋಲ್‌ಕೀಪರ್ಸ್ :** ಕೃಷನ್ ಬಿ.ಪಾಠಕ್,ಸೂರಜ್ ಕರ್ಕೇರಾ. **ಡಿಫೆಂಡರ್ಸ್:** ಸುಮಿತ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗರಾಜ್ ಸಿಂಗ್. **ಮಿಡ್‌ಫೀಲ್ಡರ್ಸ್:** ರಾಜಿಂದರ್ ಸಿಂಗ್, ರಾಜಕುಮಾರ್ ಪಾಲ್, ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕಸಾಗರ ಪ್ರಸಾದ್. **ಫಾರ್ವರ್ಡ್ಸ್:** ಮನದೀಪ್ ಸಿಂಗ್, ಶಿಲಾನಂದ ಲಾಕ್ರಾ, ಅಭಿಷೇಕ್, ಸುಖಜೀತ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್. **ಮೀಸಲು:** ನೀಲಮ್ ಸಂಜೀಪ್ ಕ್ಸೆಸ್, ಸೆಲ್ವಂ ಕಾರ್ತಿ.

## ಏಷ್ಯಾ ಕಪ್ ಟೂರ್ನಿ : ಆಯ್ಕೆಯಾಗದ ಪ್ರಮುಖ ಆಟಗಾರರು

• ಪ್ರಜೋದಯ ವರದಿ



**ಮುಂಬೈ:** ಮುಂಬರುವ ಏಷ್ಯಾ ಕಪ್ ಟಿ-20 ಟೂರ್ನಿಗಾಗಿ 15 ಸದಸ್ಯರ ಬಳಗದ ಟೀಮ್ ಇಂಡಿಯಾವನ್ನು ಬಿಸಿಸಿಐ ಪ್ರಕಟಿಸಿದೆ. ಸೂರ್ಯ ಕುಮಾರ್ ಯಾದವ್ ತಂಡವನ್ನು ಮುನ್ನಡೆಸಲಿದ್ದು, ಶುಭಮನ್ ಗಿಲ್ ಉಪನಾಯಕರಾಗಲಿದ್ದಾರೆ.

ಈ ಮಧ್ಯೆ ಕೆಲವು ಪ್ರಮುಖ ಆಟಗಾರರು ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ವಿಫಲರಾ ಗಿದ್ದಾರೆ. ಅವರಲ್ಲಿ ಯಶಸ್ವಿ ಜೈಸ್ವಾಲ್, ಶ್ರೇಯಸ್ ಅಯ್ಯರ್, ವಾಷಿಂಗ್ಟನ್ ಸುಂದರ್, ಮೊಹಮ್ಮದ್ ಸಿರಾಜ್, ಕೆ.ಎಲ್.ರಾಹುಲ್ ಹಾಗೂ ರವಿ ಬಿಷ್ಣೋಯಿ ಪ್ರಮುಖರಾಗಿದ್ದಾರೆ.

ಈ ಬಾರಿಯ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಫೈನಲ್‌ನತ್ತ ಮುನ್ನಡೆಸಿದ್ದ ಶ್ರೇಯಸ್ ಅಯ್ಯರ್, 50.33ರ ಸರಾಸರಿಯಲ್ಲಿ (175ರ ಸ್ಟ್ರೈಕ್‌ರೇಟ್) 604 ರನ್ ಪೇರಿಸಿದ್ದರು. ಆದರೂ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಬಹಳಷ್ಟು ಉತ್ತಮ ಆಟಗಾರರು ಇದ್ದಾಗ ಆಯ್ಕೆ ಪ್ರಕ್ರಿಯೆ ತಲೆನೋವಿನ ಸಂಗತಿಯಾಗುತ್ತದೆ. ಉತ್ತಮರಲ್ಲಿಯೇ ಶ್ರೇಷ್ಠರನ್ನು ಹುಡುಕುವುದು ಸುಲಭವಲ್ಲ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಸ್ಪಷ್ಟನೆ ನೀಡಿದ್ದಾರೆ.

ಅತ್ತ ಯಶಸ್ವಿ ಜೈಸ್ವಾಲ್, ಐಪಿಎಲ್‌ನಲ್ಲಿ 43ರ ಸರಾಸರಿಯಲ್ಲಿ (159.71ರ ಸ್ಟ್ರೈಕ್ ರೇಟ್) 559 ರನ್ ಪೇರಿಸಿದ್ದರು. ಆದರೂ ಆರಂಭಿಕ ಸ್ಥಾನದಲ್ಲಿ ಗುರುತಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಜೈಸ್ವಾಲ್ ಅವರು ತಂಡಕ್ಕೆ ಆಯ್ಕೆಯಾಗದಿರುವುದು ದುರ ದೃಷ್ಟಕರ. ಅವರು ಇನ್ನೂ ಸ್ವಲ್ಪ ಕಾಲ ಕಾಯ ಬೇಕಾಗಬಹುದುಂದು ಅಗರಕರ್ ಹೇಳಿದರು.

ಐಪಿಎಲ್ ಸೇರಿದಂತೆ ಇತ್ತೀಚೆಗಿನ ಇಂಗ್ಲೆಂಡ್ ಸರಣಿಯಲ್ಲಿ ಗಮನಾರ್ಹ ಆಲ್‌ರೌಂಡ್ ಪ್ರದರ್ಶನ ನೀಡಿದ್ದ ವಾಷಿಂಗ್ಟನ್ ಸುಂದರ್ ಅವರನ್ನು ಆಯ್ಕೆಗೆ ಕಡೆಗಣಿಸಲಾಗಿದೆ. ಕರ್ನಾಟಕದ ಆಟಗಾರರ ಪೈಕಿ ಕೆ.ಎಲ್. ರಾಹುಲ್ ಹಾಗೂ ಪ್ರಸಿದ್ಧ ಕೃಷ್ಣ ಅವರನ್ನು ಆಯ್ಕೆಗೆ ಪರಿಗಣಿಸಲಾಗಿಲ್ಲ. ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ವಿಕೆಟ್ ಬೇಟೆಯಲ್ಲಿ ಅಗ್ರಸ್ಥಾನದಲ್ಲಿದ್ದ ಪ್ರಸಿದ್ಧ 15 ಪಂದ್ಯಗಳಲ್ಲಿ 25 ವಿಕೆಟ್‌ಗಳನ್ನು ಗಳಿಸಿದ್ದರು. ಇಂಗ್ಲೆಂಡ್ ಸರಣಿಯಲ್ಲಿ ಎಲ್ಲಾ ಐದು ಪಂದ್ಯಗಳನ್ನು ಆಡುವ ಮೂಲಕ ಉತ್ತಮ ಲಯದೊಂದಿಗೆ ಅದ್ಭುತ ದೈಹಿಕ ಸಾಮರ್ಥ್ಯ ಪ್ರದರ್ಶಿಸಿದ್ದ ಮೊಹಮ್ಮದ್ ಸಿರಾಜ್ ಅವರೂ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಟಿ-20 ಕ್ರಿಕೆಟ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದ ರವಿ ಬಿಷ್ಣೋಯಿ ಅವರನ್ನು ಕಡೆಗಣಿಸಲಾಗಿದೆ.

ಇನ್ನುಳಿದಂತೆ ರಿಯಾನ್ ಪರಾಗ್, ಧ್ರುವ್ ಜುರೇಲ್, ಇಶಾನ್ ಕಿಶನ್ ಹಾಗೂ ನಿತೀಶ್ ರೆಡ್ಡಿ ಸಹ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K